ಮಾಡತಕ್ಕ ತೀರ್ಮಾನ ಆಗಿದೆ. ಒಂದು ಯೂನಿಟ್‌ಗೆ ಶೇಕಡ 50 ಪೈಸೆ ಹಾಕಬೇಕು ಎನ್ನತಕ್ಕದ್ದು. ಅದಕ್ಕೆ ಎಲ್ಲಾ ರಾಜ್ಯದವರೂ ಒಪ್ಪಿದ್ದಾರೆ ಎನ್ನತಕ್ಕದ್ದು ಪತ್ರಿಕೆಗಳಲ್ಲಿ ಓದಿದ್ದೇವೆ. ಏನು ಮಾಡುತ್ತೀರಿ, ಹೌದೋ ಅಥವಾ ಇಲ್ಲವೋ ರಾಜ್ಯ ಸರ್ಕಾರದ ನಿಲುವು ಏನು ಎಂದು ತಿಳಿದುಕೊಳ್ಳಬೇಕಾಗಿರತಕ್ಕದ್ದು ಅತಿ ಅವಶ್ಯಕ.

ಅಧ್ಯಕ್ಷರು:- ಅವರು ಬರುತ್ತಾರೆ.

ಶ್ರೀ ಸಿ. ಬೈರೇಗೌಡ:- ಅವರು ಬರುವುದರೊಳಗೆ....

ಅಧ್ಯಕ್ಷರು:- ಅವರು ಬಂದ ಮೇಲೆ ತಾವು ರೈಸ್ ಮಾಡಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ದಿವಸದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇನ್ನೂ ಎರಡು ಪ್ರಸ್ತಾವನೆಗಳು ಇವೆ. ಒಂದು ಟ್ರಾನ್ಸ್‌ಫಾರ್ಮರ್ ವಿಫಲವಾದ ಪ್ರಯುಕ್ತ. ಅದನ್ನು ಕೊನೆಗೆ ತೆಗೆದುಕೊಳ್ಳೋಣ. ಈಗ ಮುಖ್ಯಮಂತ್ರಿಗಳು ಬರುತ್ತಾರೆ, ಆಶ್ರಯದ ಮಂತ್ರಿಗಳು ಇದ್ದಾರೆ. ಆದ್ದರಿಂದ ಆಶ್ರಯದ್ದನ್ನು ಈಗ ತೆಗೆದುಕೊಳ್ಳೋಣ. ಈಗ ಐದು ಗಂಟೆ, ಟೈಮ್ ಬಹಳ ಸೀಮಿತವಾಗಿದೆ. ಆದ್ದರಿಂದ ಲಘುನೇ ಮುಗಿಸಿದರೆ ನಾವು ಲಘುನೇ ಅಡಜರ್ನ್ ಮಾಡಬಹುದು.

ಶ್ರೀ ಸಿ. ಬೈರೇಗೌಡ:- ಸದನ ಮುಂದುವರಿಯುತ್ತದೆಯೋ ಅಥವಾ ಇಲ್ಲವೊ?

ಅಧ್ಯಕ್ಷರು:- ನಾಳೆ ರಜೆ ಇದೆ, ಪುನಃ ಮಾನ್ಯ ಸದಸ್ಯರುಗಳು ಹೋಗಿ ಮತ್ತೆ ಬಂದು ಜೊತೆಗೆ ಮುಂದಿನ ಆಸನಗಳು ಖಾಲಿ ಇವೆ, ಎಲ್ಲಾ ಹೋಗಿದ್ದಾರೆ. ಆದ್ದರಿಂದ...

ಶ್ರೀ ಸಿ. ಬೈರೇಗೌಡ:- ಕೆಲವು ಪ್ರಮುಖವಾದ ವಿಷಯಗಳಿಗೆ ಉತ್ತರವನ್ನಾದರೂ ಕೊಡಿಸಿದರೆ, ನಾವು ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ವಿದ್ಯುತ್ ನಮ್ಮನ್ನು ಬಹಳ ಕಾಡಿಸತಕ್ಕ ವಿಷಯ, ಬಹಳ ತೊಂದರೆಯಲ್ಲಿರತಕ್ಕ ವಿಷಯ.

ಅಧ್ಯಕ್ಷರು:- ಅದು ಮುಖ್ಯಮಂತ್ರಿಗಳು ಬಂದ ಮೇಲೆ ಅದನ್ನು ತಾವು ರೈಸ್ ಮಾಡಿ.

ಶ್ರೀ ಸಿ. ಬೈರೇಗೌಡ:- ಅವರು ಬರುತ್ತಾರೆಂದು ತಮಗೆ ಖಾತರಿ ಇದ್ದರೆ ಆಗಬಹುದು.

ಅಧ್ಯಕ್ಷರು:- ಅವರು ಬರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನಾವು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಕೇಳತಕ್ಕದ್ದು ಇದೆ, ತಮಗೆ ಪತ್ರವನ್ನು ಬರೆದಿದ್ದೆವು. ದಯವಿಟ್ಟು ಅವರನ್ನು ಕರೆಯಿಸಬೇಕು. ಮುಖ್ಯಮಂತ್ರಿಗಳು ನಿನ್ನೆ ಹೇಳಿದರು, ವಿಧಾನ ಪರಿಷತ್ತು ಇದೆ ಎಂದು, ಇವತ್ತೂ ಈ ಸದನದ ಕಡೆ ಬಂದೇ ಇಲ್ಲ.

ಅಧ್ಯಕ್ಷರು:- ಅವರು ಬರುತ್ತಾರೆ.

(2) ಆಶ್ರಯ ಹಾಗೂ ಇತರೆ ವಸತಿ ಯೋಜನೆಗಳಲ್ಲಿ ಆಗಿರುವ ಹಣ ದುರುಪಯೋಗ

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, 'ಆಶ್ರಯ' ಯೋಜನೆಯನ್ನು ಸರ್ಕಾರದವರು ಯಾವಾಗ ಘೋಷಣೆ ಮಾಡಿದರು ಆಗ ನಾವೂ ಸಹ ಸ್ವಾಗತ ಮಾಡಿದ್ದೇವೆ. ಏಕೆಂದರೆ ಈ ಯೋಜನೆಯಲ್ಲಿ ಬಡ ಜನರಿಗೆ, ಯಾರಿಗೆ ನಿವೇಶನ ಇಲ್ಲ, ಅವರಿಗೆ ನಿವೇಶನ ಕೊಡುವ ವ್ಯವಸ್ಥೆ ಮತ್ತು 15 ಸಾವಿರ ರೂಪಾಯಿ ವೆಚ್ಚದ ಒಂದು ಮನೆ ಕಟ್ಟುವ ಯೋಜನೆ ಅದು. ಆದರೆ ಆ ಯೋಜನೆ ಯಾವ ದೃಷ್ಟಿಯಿಂದ ಕಾರ್ಯರೂಪವಾಗುತ್ತಿದೆ ಎಂದು ನೋಡಿದರೆ, ಇದು 'ಸೀಟ್ ಆಫ್ ಪವರ್' ನಲ್ಲಿ ಯಾವ ಜನ ಇದ್ದಾರೆ, ಅವರಿಗೆ ಇದು ಆಶ್ರಯ ಆಗಿದೆ ಎಂದು ಹೇಳುತ್ತೇನೆ.

5-10 P.M.

ಈ ಯೋಜನೆ ಬಡ ಜನರಿಗೆ ಆಶ್ರಯ ಆಗಿಲ್ಲ. 2 ಲಕ್ಷ 38 ಸಾವಿರ ಮನೆ ಕಟ್ಟುತ್ತೇವೆಂದು ಘೋಷಣೆ ಮಾಡಿದ ನಿಮ್ಮ ಸರ್ಕಾರ ಇನ್ನೂವರೆಗೂ ರಾಜ್ಯದಲ್ಲಿ ಎರಡೂವರೆ ಸಾವಿರ ಮನೆಯನ್ನು ಕಟ್ಟಲಿಕ್ಕೆ ಆಗಲಿಲ್ಲ. ತಾವು ಐದು ಸಾವಿರ ಮನೆಯನ್ನು ಕಟ್ಟಿದ್ದೇವೆಂದು ಹೇಳುತ್ತೀರಿ. ನಾವು ನೋಡಿಲ್ಲ. ನಮ್ಮ ಜಿಲ್ಲೆಯಲ್ಲಿ ನನ್ನ ಮತದಾರರ ಕ್ಷೇತ್ರದಲ್ಲಿ ಎಲ್ಲಿ ಆಗಿದೆಯೋ ನನಗೆ ಗೊತ್ತಿಲ್ಲ. ನಾನು ಇಡೀ ರಾಜ್ಯವನ್ನು ಪ್ರವಾಸ ಮಾಡಿದ್ದೇನೆ. ಎಲ್ಲೆಲ್ಲಿ ನಾನು ಪ್ರವಾಸ ಮಾಡಿದ್ದೇನೆ ಅಲ್ಲಿ ಅಧಿಕಾರಿಗಳನ್ನು ಕೇಳಿದಾಗ ಆಶ್ರಯ ಯೋಜನೆಯಲ್ಲಿ ಮನೆಕಟ್ಟಲು ಕಂಟ್ರಾಕ್ಟರು ನಿಗಧಿಯಾಗಿದ್ದಾರೆ ವಿನಹ ಕೆಲಸ ಶುರು ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಕಳೆದ 15-20 ದಿವಸಗಳಿಂದ ತಾವು ಎಷ್ಟು ಕೆಲಸವನ್ನು ಶುರು ಮಾಡಿದ್ದೀರೆನ್ನುವುದು ನನಗೆ ಗೊತ್ತಿಲ್ಲ. ಯಾವ ಪ್ರಕಾರ ತಾವು ಕೆಲಸ ಮಾಡುತ್ತಿದ್ದೀರೆಂಬುದನ್ನು ನಾವು ಮನಸ್ಸು ಇಟ್ಟುಕೊಂಡು ನೋಡುತ್ತಿದ್ದೇವೆ. ಆಶ್ರಯ ಯೋಜನೆಯನ್ನು ಶುರುಮಾಡುತ್ತೇವೆಂದು ಬಾಕಿ ಎಲ್ಲಾ ಯೋಜನೆಗಳನ್ನೆಲ್ಲಾ ಬಂದ್ ಮಾಡಿಬಿಟ್ಟರು. ಸರ್ಕಾರದ ಹಲವಾರು ಯೋಜನೆಗಳು ಇದ್ದವು. ಜನತಾ ಮನೆಯ ಯೋಜನೆ ಇತ್ತು, ಹುಡ್ಕೊ ಮನೆ ಯೋಜನೆ ಇತ್ತು, ಇಂದಿರಾ ಯೋಜನೆ ಇತ್ತು, ಎಲ್ಲಾ ಮನೆಗಳನ್ನು ಮುಗಿಸಿ, ಯಾವ ಮನೆಯನ್ನು ಕಟ್ಟದೇ ಅದರ ಬಗ್ಗೆ ಯಾವುದೇ ಕಾರ್ಯಕ್ರಮ ಹಾಕದೆ ಕಳೆದ ಮೂರು ವರ್ಷಗಳಿಂದ ಈ ರಾಜ್ಯದಲ್ಲಿ ಒಂದು ಮನೆಯನ್ನು ಬಡವರಿಗೆ ಕಟ್ಟಿಕೊಟ್ಟಿಲ್ಲ. ಇವರು ಆಶ್ರಯ ಯೋಜನೆಯಲ್ಲಿ ಹೌಸಿಂಗ್ ಬೋರ್ಡಿಂಗೆ ನೋಡಲ್ ಏಜೆನ್ಸಿ ಎಂದು ಮಾಡಿದರು. ಇದರ ಅವಶ್ಯಕತೆ ಇರಲಿಲ್ಲ. ಇಲ್ಲಿ ಮನೆಯನ್ನು ಕಟ್ಟುವ ಕೆಲಸ ಜಿಲ್ಲಾಪರಿಷತ್ತು ಮಾಡಲಿಕ್ಕೆ ಆಗುತ್ತಿತ್ತು, ಮಂಡಲ್ ಪಂಚಾಯತ್ ಮುಖಾಂತರ ಮಾಡಲಿಕ್ಕೆ ಆಗುತ್ತಿತ್ತು. ಏನು ಕೆಲಸವನ್ನು ಹೌಸಿಂಗ್ ಬೋರ್ಡಿಗೆ ಕೊಟ್ಟಿದ್ದೀರಿ. ಆ ಕೆಲಸವನ್ನು ಹೌಸಿಂಗ್ ಬೋರ್ಡಿನವರು ಮಾಡುತ್ತಿಲ್ಲ. ನಾವೇನು ಮನೆಯನ್ನು ಕಟ್ಟಿದ್ದೇವೆ ಅದರ ಕಂಡೀಷನ್ನು ನನಗೆ ಗೊತ್ತು. ಇಂತಹ ಪರಿಸ್ಥಿತಿಯಲ್ಲಿ ಹೊಸ ಜವಾಬ್ದಾರಿಯನ್ನು ಹೌಸಿಂಗ್ ಬೋರ್ಡಿಗೆ ಕೊಟ್ಟಿದ್ದರಿಂದ ಇಡೀ ಹೌಸಿಂಗ್ ಯೋಜನೆಗೆ ತಿಲಾಂಜಲಿ ಸಿಕ್ಕಿತು. ಯಾರ ಹೆಸರಿನಿಂದ ತಾವು ಅಲ್ಲಿ ಕುಳಿತಿರಿ, ಯಾರ ಆರ್ಶೀವಾದದಿಂದ ನೀವು ಅಲ್ಲಿ ಕುಳಿತಿರಿ, ಇಂದಿರಾಗಾಂಧಿಯವರನ್ನು ಮರೆತು ಬಿಟ್ಟಿರಿ, ಅವರ ಹೆಸರಿನಲ್ಲಿ ಈ ರಾಜ್ಯದಲ್ಲಿ ಒಂದು ಮನೆಯಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮುಖ್ಯಮಂತ್ರಿಯಾಗುವುದಕ್ಕಿಂತ ಮುಂಚೆ, ಮುಖ್ಯಮಂತ್ರಿಯಾದನಂತರ ಸಹ ನಾನು ಮೇಜರ್ ಸರ್ಜರಿ ಮಾಡುತ್ತೇನೆ. ಹಿಂದೆ ಸಾಕಷ್ಟು ಭ್ರಷ್ಟಾಚಾರಗಳು ಇದ್ದವು ಅದರ ಬಗ್ಗೆ ತನಿಖೆ ಮಾಡುತ್ತೇನೆಂದು ಹೇಳಿದರು. ಇವರು ಅದರ ಬಗ್ಗೆ ಏನು ಮಾಡಿದ್ದಾರೆ. ಇವತ್ತು ಸಮಯದ ಅಭಾವದಿಂದ ನಾನು ಬೇರೆ ವಿಷಯಕ್ಕೆ ಹೆಚ್ಚು ಖರ್ಚು ಮಾಡುವುದಿಲ್ಲ. ಒಂದೇ ಉದಾಹರಣೆಯನ್ನು ಕೊಡುತ್ತೇನೆ. ತಿಪ್ಪಗೊಂಡನಹಳ್ಳಿಯ ಬಗ್ಗೆ ಹೇಳುವುದಾದರೆ ಹೈಕೋರ್ಟಿನಿಂದ ಸ್ಟ್ರಿಕ್ಚರ್ಸ್ ಪಾಸ್ ಆಗಿದೆ. Rule of law has been flouted ಹೈಕೋರ್ಟ್ ಜಡ್ಜ್‌ಮೆಂಟ್ ಅನ್ನು ಓವರ್‌ಕಂ ಮಾಡಲಿಕ್ಕೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಸ್ಟ್ರಿಕ್ಚರ್ ಪಾಸ್ ಮಾಡಿದರೂ, ನಾವು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿಯನ್ನು, ವಾಪಸ್ಸು ತೆಗೆದುಕೊಳ್ಳುತ್ತೇವೆ. Is it sufficient? ನಿಮ್ಮ ಜನರಲ್ ಸೆಕ್ರೆಟರಿ ದೆಹಲಿಯಲ್ಲಿ ಹೇಳಿದ ಹಾಗೆ "Mr.Bangarappa has resigned for his omissions and commissions. This punishment is sufficient. So, no enquiry will be done" ಹಾಗಾಗಿ ನೀವು ಅದೇ ಹೇಳುತ್ತೀರಾ? ಇದೆ ನಿಮ್ಮ ಮೇಜರ್ ಸರ್ಜರಿಯೇ?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ದೇಶಪಾಂಡೆಯವರು ಹೌಸಿಂಗ್ ಬೋರ್ಡ್ ಡಿಸ್‌ಕಷನ್ ಮಾಡುತ್ತಿರುವಾಗ ಡಿ.ಎಲ್.ಎಫ್ ವಿಚಾರ ಮಾತನಾಡಿದರು. ಡಿ.ಎಲ್.ಎಫ್ ವಿಚಾರದ ಬಗ್ಗೆ ಏನಾಗಿದೆ ಅಂದರೆ ಹೈಕೋರ್ಟ್ ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆ, ಹೈಕೋರ್ಟ್‌ನಲ್ಲಿ ಏನು ಜಡ್ಜ್‌ಮೆಂಟ್ ಆಗಿದೆ ಅದಕ್ಕೆ ಸುಪ್ರೀಂ ಕೋರ್ಟ್‌ನವರು ಸ್ಟೇ ಮಾಡಿದ್ದಾರೆ. ಅದನ್ನು

ಡಿಸ್‌ಕಷನ್ ಮಾಡುವುದಕ್ಕೆ ಅಲೋ ಮಾಡುವುದಾದರೆ ಸಪರೇಟ್ ಆಗಿ ಒಂದು ದಿವಸ ಡಿ.ಎಲ್.ಎಫ್ ವಿಚಾರವನ್ನೇ ಬೇಕಾದರೆ ಚರ್ಚೆ ಮಾಡೋಣ. ಯಾರ್‍ಯಾರ ಕಾಲದಲ್ಲಿ ಏನೇನು ಆಗಿದೆ ಇದಕ್ಕೆ ಯಾರು ಪರ್ಮಿಶನ್ ಕೊಟ್ಟಿದ್ದಾರೆ ಏನಾಗಿದೆ ಎಂಬುದರ ಬಗ್ಗೆ ತಿಳಿದುಕೊಳ್ಳಲು ನಾಳೆ ದಿವಸ ಕುಳಿತುಕೊಂಡು ಅದರ ಬಗ್ಗೆ ಚರ್ಚೆ ಮಾಡೋಣ ನಾವು ತಯಾರಾಗಿದ್ದೇವೆ.

ಡಾ।। ಜೀವರಾಜ್ ಆಳ್ವ:- ಒಂದು ದಿವಸದಲ್ಲಿ ಇದು ಆಗುವುದಿಲ್ಲ, ಎರಡು ವರ್ಷದ ದುರಾಡಳಿತದ ಬಗ್ಗೆ ಚರ್ಚೆ ಮಾಡಬೇಕಾದರೆ ಪೂರ್ಣವಾಗಿ ವಿಧಾನ ಸಭೆಯ ಅಧಿವೇಶನವನ್ನು ಕರೆಯಬೇಕಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್:- ಯಾವತ್ತಾದರೂ ತೆಗೆದುಕೊಳ್ಳಲಿ, ಏಕೆಂದರೆ ಇವತ್ತು ಚರ್ಚೆ ಮಾಡಿದರೆ ನಾವುಗಳು ಅದರಲ್ಲಿ ಭಾಗವಹಿಸಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾಡಿ, I don't want to divert ನಾನು ಒಪ್ಪಿಕೊಳ್ಳುತ್ತೇನೆ. What Mr. Chandregowda wants is practical politics. Practical politics ಅಂದರೆ, ignore of facts ಇದು ನಡೆಯುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವೊತ್ತು ಯಾವ ಜನ ತೀರ್ಪು ಕೊಟ್ಟು, ಬಹುಮತ ಕೊಟ್ಟು ನಿಮ್ಮ ಮೇಲೆ ವಿಶ್ವಾಸವಿಟ್ಟು ಇಲ್ಲಿ ಕೂಡಿಸಿದ್ದಾರೆ, ಅವರ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ, ಚಿಂತನೆ ಮಾಡಬೇಕಾಗುತ್ತದೆ. 'ಆಶ್ರಯ' ಯೋಜನೆಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣ 30 ಕೋಟಿ ರೂಪಾಯಿಗಳು. ಮತ್ತೊಂದು 'ಅಂಬೇಡ್ಕರ್ ಯೋಜನೆ' ಎಂದು ಮಾಡಿದರು. ಪಟ್ಟಣ ಪ್ರದೇಶದಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರ ಸಲುವಾಗಿ in memory of Dr.Babasaheb Ambedkar 20,000 ಮನೆಗಳನ್ನು ಕಟ್ಟುವ ಕಾರ್ಯಕ್ರಮ ಹಾಕಿಕೊಂಡರು. ಅದಕ್ಕೆ 15 ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. ಎಲ್ಲಾ ಹಣವೂ ಸೇರಿ ಒಟ್ಟು ಸರ್ಕಾರದಿಂದ 45 ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. 'ಆಶ್ರಯ' ಯೋಜನೆಯಲ್ಲಿ 2 ಲಕ್ಷ 32 ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಮತ್ತು ಅಂಬೇಡ್ಕರ್ ಯೋಜನೆಯಲ್ಲಿ 20,000 ಮನೆಗಳನ್ನು ಕಟ್ಟುವುದಕ್ಕೆ ಮುಂಗಡವಾಗಿ 15 ಕೋಟಿ ರೂಪಾಯಿಗಳು ಸರ್ಕಾರದಿಂದ ಬಿಡುಗಡೆಯಾಯಿತು. ಹೌಸಿಂಗ್ ಬೋರ್ಡ್‌ನಲ್ಲಿ ನನ್ನ ಮಿತ್ರರಾದ ಬಹಳ able administrator ಕಾಗೋಡು ತಿಮ್ಮಪ್ಪನವರು ಛೇರ್ಮನ್ ಆಗಿದ್ದರು. ನಾನೇನು ತಿಳಿದುಕೊಂಡಿದ್ದೆ ಅಂದರೆ, ಕಾಗೋಡು ತಿಮ್ಮಪ್ಪನವರು ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದಾರೆ, ಅವರಿಗೆ ಒಳ್ಳೆಯ ಅನುಭವ ಇದ್ದು, ಈ 'ಆಶ್ರಯ' ಯೋಜನೆಯನ್ನೂ ಸರಿಯಾಗಿ ಅನುಷ್ಠಾನಗೊಳಿಸುತ್ತಾರೆ, ಇದರಿಂದ ರಾಜ್ಯದ ಬಡ ಜನರಿಗೆ ಒಳ್ಳೆಯದಾಗಬಹುದು ಎಂದು. ಮುಂಜಾನೆಯಾದ ಕೂಡಲೇ ಈ ಕಾಂಗ್ರೆಸ್ ಜನರು ಡಾ।। ಅಂಬೇಡ್ಕರ್ ಅವರ ಹೆಸರನ್ನು ತೆಗೆದುಕೊಳ್ಳುತ್ತಿದ್ದಾರೆ; ಅವರ ಸ್ಮರಣೆಯಲ್ಲಿ ಒಂದು ಒಳ್ಳೆಯ ಕೆಲಸ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ, ಇವೊತ್ತು ಏನಾಗಿದೆಯೆಂದರೆ, ಈ ಆಶ್ರಯ ಯೋಜನೆಯಲ್ಲಿ ಸರ್ಕಾರದಿಂದ 30 ಕೋಟಿ ರೂಪಾಯಿಗಳು ಬಿಡುಗಡೆಯಾಗಿ, ಅದರಲ್ಲಿ ಹನ್ನೊಂದೂವರೆ ಕೋಟಿ ರೂಪಾಯಿಗಳನ್ನು ಮೊಬಿಲೈಸ್ ಅಡ್ವಾನ್ಸ್ ಎಂದು ಕಂಟ್ರಾಕ್ಟರುಗಳಿಗೆ ಕೊಟ್ಟರು. ಕೆಲವು ಕಂಟ್ರಾಕ್ಟರುಗಳಿಗೆ ಬ್ಯಾಂಕ್ ಗ್ಯಾರಂಟಿ ಕೊಡಿ ಎಂದು ಹೇಳಿದರೆ majority of the bank guarantees are all forged and bogus. ಈ ಕಂಟ್ರಾಕ್ಟರುಗಳನ್ನು ಯಾರು ಆಯ್ಕೆ ಮಾಡಿದರು? ಇವರನ್ನು ಆಯ್ಕೆ ಮಾಡುವುದಕ್ಕೆ ಒಂದು ಸಮಿತಿ ಮಾಡಿದರು. ಆ ಸಮಿತಿಯಲ್ಲಿ ನಿವೃತ್ತರಾದ ಗೋಪಾಲಕೃಷ್ಣರಾವ್, ಚೀಫ್ ಇಂಜಿನಿಯರ್, ನಂದಪ್ಪಶೆಟ್ಟಿ, ಡೆಪ್ಯೂಟಿ ಡೈರೆಕ್ಟರ್ (ಪ್ರಾಜೆಕ್ಟ್), ಮತ್ತು ಸದಾಶಿವ, ಕಂಟ್ರೋಲರ್ ಆಫ್ ಫೈನಾನ್ಸ್, ಈ ಮೂವರು ಕಂಟ್ರಾಕ್ಟರುಗಳನ್ನು ಆಯ್ಕೆ ಮಾಡಬೇಕು. Who should be the contractor? ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬರಿಗೆ, ಮತ್ತು ಒಬ್ಬರಿಗೆ ಎರಡು ಜಿಲ್ಲೆಯಂತೆ ಕಂಟ್ರಾಕ್ಟ್ ಕೊಟ್ಟರು.

ಟೆಂಡರ್ಸ್ ಇಲ್ಲ, ಯಾವುದೇ ಪ್ರೊಸೀಜರ್ ಅನ್ನು ಫಾಲೋ ಮಾಡಲಿಲ್ಲ. ಸರ್ಕಾರದಿಂದ ಏನು ಆದೇಶ ಹೋಗುತ್ತದೆ. ಅಥವಾ ಹೌಸಿಂಗ್ ಬೋರ್ಡ್ ಅಧ್ಯಕ್ಷರು ಏನು ಹೇಳುತ್ತಾರೆ ಅದನ್ನು ಈ ಮೂರು ಜನರು ಅನುಷ್ಠಾನಗೊಳಿಸಬೇಕು. ಯಾರಿಗೆ ಹೌಸಿಂಗ್ ಬೋರ್ಡ್ ಸರಿಯಾಗಿ ಪರಿಚಯವಿಲ್ಲವೋ, ಯಾವ ಕಂಟ್ರಾಕ್ಟರ್ಸ್ ಹೌಸಿಂಗ್ ಬೋರ್ಡ್‌ನಲ್ಲಿ ಕೆಲಸ ಮಾಡಿಲ್ಲವೋ ಅಂತಹವರಿಗೆ ಕಂಟ್ರಾಕ್ಟ್ ಕೊಟ್ಟರು. 11 ಕೋಟಿ 50 ಲಕ್ಷ ರೂಪಾಯಿಗಳನ್ನು ಮೊಬಿಲೈಸ್ ಅಡ್ವಾನ್ಸ್ ಎಂದು ಕೊಟ್ಟಿದ್ದು ಒಂದು ಕಡೆ, ಇನ್ನೊಂದು ಕಡೆ ಮತ್ತೊಂದು ಹೆಜ್ಜೆ ಮುಂದೆ ಹೋಗಿ 5 ಕೋಟಿ 13 ಲಕ್ಷ ರೂಪಾಯಿಗಳನ್ನು ನಾಗರಾಜ್ ಎನ್ನುವ ಒಬ್ಬ ಕಂಟ್ರಾಕ್ಟರ್‌ಗೆ ಕೊಟ್ಟರು. ಈ ನಾಗರಾಜ್ ಎನ್ನುವವರು ಯಾರು? He was moving on the streets. ಆತ ಕಂಟ್ರಾಕ್ಟರ್ ಅಲ್ಲ, ರಿಜಿಸ್ಟರ್ಡ್ ಕಂಟ್ರಾಕ್ಟರ್ ಅಲ್ಲ, ಕಂಟ್ರಾಕ್ಟ್ ತೆಗೆದುಕೊಂಡು ಗೊತ್ತಿಲ್ಲ, ಮನೆಗಳನ್ನು ಕಟ್ಟಿಯೂ ಗೊತ್ತಿಲ್ಲ, ಅನುಭವವಿಲ್ಲ, ಈತನಿಗೆ unsecured advance ಈ 5 ಕೋಟಿ 13 ಲಕ್ಷ ರೂಪಾಯಿಗಳನ್ನು ಆತನಿಗೆ ಕೊಟ್ಟರು. ಮಾನ್ಯ ಅಧ್ಯಕ್ಷರೆ, ನಾನು ನನ್ನ ಸದಸ್ಯ ಸ್ನೇಹಿತರಾದಂಥ ಶ್ರೀ ಸಿಂಧ್ಯರವರ ಹತ್ತಿರ 100 ರೂಪಾಯಿಗಳನ್ನು ಕೇಳಿದರೆ, ಅವರು ದುಡ್ಡನ್ನು ಕೊಡಬೇಕೆ? ಬೇಡವೆ? ಎಂದು ವಿಚಾರ ಮಾಡುತ್ತಾರೆ. ಅಂಥಾದ್ದರಲ್ಲಿ.....

ಅಧ್ಯಕ್ಷರು:- ನಿಮ್ಮ ಮೇಲೆ ಅವರಿಗೆ ಅಷ್ಟು ಅಪನಂಬಿಕೆ ಇದೆಯೆ?

ಶ್ರೀ ಆರ್.ವಿ. ದೇಶಪಾಂಡೆ:- ಅದು ದುಡ್ಡಲ್ಲವೆ, ಇವರು 5 ಕೋಟಿ 13 ಲಕ್ಷ ರೂಪಾಯಿಗಳನ್ನು ಹೌಸಿಂಗ್ ಬೋರ್ಡಿಗೆ.......

ಶ್ರೀ ವಾಟಾಳ್ ನಾಗರಾಜ್:- ಒಬ್ಬ ವಿರೋಧ ಪಕ್ಷದ ನಾಯಕರಾಗಿ ಇಷ್ಟೊಂದು ಸುಳ್ಳು ಹೇಳಬಾರದು. ನನ್ನ ಎದುರಿನಲ್ಲಿಯೇ ಎಷ್ಟೋ ಸಲ ಸಿಂಧ್ಯರವರಿಂದ ದೇಶಪಾಂಡೆಯವರು ದುಡ್ಡು ತೆಗೆದುಕೊಂಡಿದ್ದಾರೆ, ಕೊಟ್ಟಿದ್ದಾರೆ. ಆದರೆ, ಈ ರೀತಿ ಹೇಳುವುದು ತೀರಾ ಒಳ್ಳೆಯದಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಈ ನಾಗರಾಜ್ ಎಂಬುವವರು ಶಿವಮೊಗ್ಗ ಜಿಲ್ಲೆಯವರು. ಮಾಜಿ ಮುಖ್ಯಮಂತ್ರಿಗಳ ಜಿಲ್ಲೆಯವರು ಹೌಸಿಂಗ್ ಬೋರ್ಡ್ ಅಧ್ಯಕ್ಷರು ಯಾವ ಜಿಲ್ಲೆಯಿಂದ ಬಂದಿದ್ದಾರೋ, ಆ ಜಿಲ್ಲೆಯವರು, ತೀರ್ಥಹಳ್ಳಿಯವರು. ಇವರು ಕಂಟ್ರಾಕ್ಟ್ ತೆಗೆದುಕೊಂಡು ಅನುಭವವಿಲ್ಲ. ಆದರೆ ಅವರಿಗೆ 5 ಕೋಟಿ 13 ಲಕ್ಷ ರೂಪಾಯಿಗಳನ್ನು ಕೊಟ್ಟರು, ಬ್ಯಾಂಕ್ ಗ್ಯಾರಂಟಿ ಇಲ್ಲ, ಸೆಕ್ಯೂರಿಟಿ ಇಲ್ಲ. ಈ 5 ಕೋಟಿ 13 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಇವರು ಏನು ಮಾಡಿದರು? ಕೆಲವು ಹಣ ವಾಪಸ್ಸು ಬಂದು ಯಾರಿಗೆ ಹೋಗಬೇಕಾಗಿತ್ತೋ, ಅವರಿಗೆ ಹೋಯಿತು. ಈತ ಮನೆಗಳನ್ನು ಕಟ್ಟಿಲ್ಲ. ಬಂದ ಕೆಲವು ಹಣದಲ್ಲಿ 7-8 ಕಾರುಗಳನ್ನು ಕೊಂಡುಕೊಂಡರು. ಯಾವ ವ್ಯಕ್ತಿ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕೆ ಶಕ್ತಿ ಇರಲಿಲ್ಲವೋ, ಇವೊತ್ತು ನಾಗರಾಜ ಅವರು ಕಾಂಟೆಸ್ಸಾ ಕಾರಿನಲ್ಲಿ ಓಡಾಡುತ್ತಿದ್ದಾರೆ. ಅಲ್ಲದೆ, ಶಿವಮೊಗ್ಗ ಜಿಲ್ಲೆಯ ನಮ್ಮ ಪಕ್ಷದ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು, ಅಧ್ಯಕ್ಷರಾಗಿದ್ದಾಗ ಯಾವ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರೋ, ಆ ಮನೆಯನ್ನು ಸಹ ಖರೀದಿ ಮಾಡಿದ್ದಾರೆ. 5 ಕೋಟಿ 13 ಲಕ್ಷ ರೂಪಾಯಿಗಳು ಉಪಯೋಗ ಆಗಬೇಕಾದುದರಿಂದ ಆ ರೀತಿ ಮಾಡಿದರು. I think in the history of Government. ಯಾವ ಸರ್ಕಾರ ಅಥವಾ ಯಾವ ಆರ್ಗನೈಜೇಷನ್ ಅಥವಾ ಯಾವ ಇನ್ಸ್‌ಟಿಟ್ಯೂಷನ್ ಸಹ ಈ ರೀತಿ ಹಣ ಕೊಟ್ಟಿದ್ದನ್ನು ನಾನು ಕೇಳಿಲ್ಲ. This Ashraya scheme is the biggest scandal in this century. ಈ ರೀತಿ ಇವೊತ್ತು ಸರ್ಕಾರ ಹಣವನ್ನು ಬಟವಾಡೆ ಮಾಡುತ್ತಾ ಹೋದರೆ, ಇದು ಯಾರ ಹಣ? ಈ ಹಣವನ್ನು ಕೊಡುವುದಕ್ಕೆ ನಿಮಗೆ ಏನು ಅಧಿಕಾರ ಇದೆ? ಇದರಿಂದ ಏನು ಪ್ರಯೋಜನವಾಗಿದೆ? ಈ ಹಣ ಕೊಡುವ ಉದ್ದೇಶವಾದರೂ ಏನು? ಈ ಹಣ ಕೊಡುವ ಕನ್ಸಿಡರೇಷನ್ ಏನು? ಈ ಪ್ರಶ್ನೆಗಳಿಗೆಲ್ಲಾ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಸರ್ಕಾರ ಇದಕ್ಕೆ ಜವಾಬ್ದಾರಿಯಾಗಿದೆ. ಆ ಸಮಯದಲ್ಲಿ ಅಧಿಕಾರಿ ಏನು

ಮಾಡುತ್ತಿದ್ದರು? ಹಿರಿಯ ಅಧಿಕಾರಿಗಳು ಹೌಸಿಂಗ್ ಬೋರ್ಡ್‌ನಲ್ಲಿದ್ದು, ಅವರ ಜವಾಬ್ದಾರಿ ಏನು? ನಾನ್ ಅಫಿಸಿಯಲ್ ಛೇರ್ಮನ್‌ರ ಜವಾಬ್ದಾರಿ ಏನು? ಸಂಬಂಧಪಟ್ಟ ಮಂತ್ರಿಗಳ ಜವಾಬ್ದಾರಿ ಏನು? ಮುಖ್ಯಮಂತ್ರಿಗಳ ಜವಾಬ್ದಾರಿ ಏನು? ಮುಂದೆ ಏನಾಯಿತು? Shirkey from Poona. ಶಿರ್ಕೆ ಎನ್ನುವ ಒಂದು ಕಂಪೆನಿಯನ್ನು ಹಿಡಿದುಕೊಂಡು, ಆ ಕಂಪನಿಗೆ 60 ಬ್ಲಾಕ್ ಮೇಕಿಂಗ್ ಮೆಷಿನ್‌ಗಳನ್ನು ಖರೀದಿ ಮಾಡುವಂತೆ ಆದೇಶ ಕೊಟ್ಟರು. ಈ ಕಂಪನಿಯವರು ಯಾರು? ಇವರ ಪರಿಚಯ ನಿಮಗಿದೆಯೆ? ಮೆಷಿನರಿಯನ್ನು ಖರೀದಿ ಮಾಡಿರುವುದರ ಬಗ್ಗೆ ಟೆಂಡರ್ ಇಲ್ಲ, ಕೊಟೇಷನ್ ಇಲ್ಲ, ಆ ಶಿರ್ಕೆ ಕಂಪನಿಯವರನ್ನು ಕರೆದು ''ತೆಗೆದುಕೊಳ್ಳಿ ಶೆಟ್ಟಿಯವರೇ'' ಎಂದು ಅವರ ಕೈಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟರು. ಒಂದೊಂದು ಮೆಷಿನ್ ಅನ್ನು ಎರಡೂವರೆ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ. ಆದರೆ, ಖರೀದಿ ಮಾಡಿದಂಥ ಮೆಷಿನರಿ ಸರಿಯಾಗಿ ನಡೆಯುತ್ತಿಲ್ಲ. ಅದೇ ಮೆಷಿನರಿಯನ್ನು ಇವೊತ್ತು ನಮ್ಮ ರಾಜ್ಯದಲ್ಲಿ ಖರೀದಿಸಿದರೆ 1 ಲಕ್ಷ ರೂಪಾಯಿಗಳಾಗುತ್ತವೆ. ಈ ತರಹದ ವ್ಯವಹಾರಗಳು ಈ 'ಆಶ್ರಯ' ಯೋಜನೆಯಲ್ಲಿ ನಡೆಯುತ್ತಿದೆ. ಇದೇ 'ಆಶ್ರಯ' ಯೋಜನೆಯನ್ನೇ ನೀವು ಬಡ ಜನರಿಗೆ ಕೊಟ್ಟಿದ್ದುದು? ಯಾರಿಗೋಸ್ಕರ ಈ ಆಶ್ರಯ ಯೋಜನೆ ಇದೆ? ಈ ಆಶ್ರಯ ಯೋಜನೆ ಬಡ ಜನರಿಗಾಗಿ ಇಲ್ಲ. ಆ ಕಾಲದಲ್ಲಿ ಯಾರು seat of power ನಲ್ಲಿ ಇದ್ದರೋ, ಅವರಿಗೆ ಈ ಯೋಜನೆಯಿಂದ ಅನುಕೂಲವಾಯಿತು. ಹಾಗಾಗಿ ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈ ರೀತಿ ಹಣವನ್ನು ದುರುಪಯೋಗ ಮಾಡುವುದಕ್ಕೆ ಈ ಶಾಸನ ಸಭೆ ನಿಮಗೆ ಯಾವುದೇ ಅಧಿಕಾರ ಕೊಟ್ಟಿಲ್ಲ. ಇದೊಂದು ಬೇಜವಾಬ್ದಾರಿ ಕೆಲಸ. ಇದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ, ಮಿಸ್‌ಯೂಸ್ ಆಗಿದೆ, ಮಿಸ್ ಅಪ್ಲಿಕೇಷನ್ ಆಫ್ ಫಂಡ್ಸ್ ಆಗಿದೆ. ಡಾ|| ಅಂಬೇಡ್ಕರ್ ಯೋಜನೆಯಡಿಯಲ್ಲಿ 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೂ, ಒಂದೂ ಪೈಸೆಯ ಕೆಲಸ ಆಗಿಲ್ಲ. ಬೇರೆ ಕೆಲವು ಹೌಸಿಂಗ್ ಸ್ಕೀಮ್‌ಗಳನ್ನು ತೆಗೆದುಕೊಂಡರು. ಅದೂ ಸಹ ಅಪ್ರೂವ್ ಆಗಿಲ್ಲ, ಪ್ರಾಜೆಕ್ಟ್ ರಿಪೋರ್ಟ್ ಇಲ್ಲ. ಈ ಆಶ್ರಯ ಯೋಜನೆಯಲ್ಲಿ ಕಂಟ್ರಾಕ್ಟರ್‌ಗಳ ಪಾತ್ರಕ್ಕಿಂತ ಹೆಚ್ಚಾಗಿ, ನಂದಪ್ಪಶೆಟ್ಟಿ, ಡೆಪ್ಯೂಟಿ ಡೈರೆಕ್ಟರ್ ಅವರ ಪಾತ್ರ ಬಹಳ ದೊಡ್ಡದಾಗಿದೆ. ಇವರು ಸುಮಾರು 10 ವರ್ಷಗಳಿಂದ ಹೌಸಿಂಗ್ ಬೋರ್ಡ್‌ನಲ್ಲಿದ್ದಾರೆ. ಅವರೇ ಎಲ್ಲಾ ಕಂಟ್ರಾಕ್ಟ್ ತಯಾರು ಮಾಡುವುದು, ಅವರೇ ತೀರ್ಮಾನ ತೆಗೆದುಕೊಳ್ಳುವುದು. ಒಬ್ಬ ಕಂಟ್ರಾಕ್ಟರ್‌ಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಆದೇಶ ಕೊಟ್ಟರೆ, ಅವರು ಕಟ್ಟಿಕೊಡುವ ಪ್ರತಿ ಮನೆಗೂ ನೂರು ರೂಪಾಯಿಯಂತೆ ಇವರಿಗೆ ಕೊಡಬೇಕು. ಅದೇ ರೀತಿ 2 ಲಕ್ಷ 38 ಸಾವಿರ ಮನೆಗಳಿಗೆ ಲೆಕ್ಕ ಹಾಕಿದರೆ ಬರುವ ಹಣವನ್ನು ನೇರವಾಗಿ ಇವರು ವಸೂಲಿ ಮಾಡಬೇಕು. ಈ ದೊಡ್ಡ ಮನುಷ್ಯನಾದ ನಂದಪ್ಪಶೆಟ್ಟಿ ಏತಕ್ಕೆ ಹೌಸಿಂಗ್ ಬೋರ್ಡಿನಲ್ಲಿ ಕೆಲಸ ಮಾಡುತ್ತಾನೆ ಎಂದು ಗೊತ್ತಿಲ್ಲ. ಇವನಿಗೆ ಒಂದು ಫ್ಯಾಕ್ಟರಿ, ಒಂದು ವರ್ಕ್‌ಶಾಪ್ ಇದ್ದು, ಮೊನ್ನೆ ಸೌತ್ ಎಂಡ್ ಸರ್ಕಲ್‌ನಲ್ಲಿ 'ಗಂಧರ್ವ ಬಾಗ್' ಅನ್ನು 60 ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದಾನೆ. ಪ್ರಿಂಟಿಂಗ್ ಪ್ರೆಸ್ ಇದೆ. ಈ ಮಹಾಶಯ ಯಾರು? ಇವರ ಬಗ್ಗೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ? ಆಶ್ರಯ ಯೋಜನೆಯಡಿಯಲ್ಲಿ ನೀಡುವಂಥ ನಿವೇಶನಗಳಿಗೆ ಸಂಬಂಧಪಟ್ಟಂತೆ ಹಕ್ಕುಪತ್ರಗಳನ್ನು ಕೊಡಬೇಕಾಗುತ್ತದೆ. ಅದರ ಪ್ರಿಂಟಿಂಗ್ ಕೆಲಸ ಕೂಡ ಇಲ್ಲಿ ನಡೆಯಿತು. ಈ ಕೆಲಸವನ್ನೂ ಆ ಮನುಷ್ಯ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ. ಆದರೆ ಆ ಸಂದರ್ಭದಲ್ಲಿ ಯಾರೋ ಒಬ್ಬ ಒಳ್ಳೆಯ ಅಧಿಕಾರಿ ಇದ್ದು ಅವರು ಅಡ್ಡ ಬಂದಿದ್ದರಿಂದಾಗಿ ಸುಮಾರು 30 ಲಕ್ಷ ರೂ. ಉಳಿತಾಯವಾಯಿತು. ಬೇನಾಮಿ ಹೆಸರಿನಲ್ಲಿ ಇವರ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಹೌಸಿಂಗ್ ಬೋರ್ಡ್‌ನ ಪ್ರಿಂಟಿಂಗ್ ಕೆಲಸ ನಡೆಯುತ್ತಿದೆ. ಇದು ಯಾವ ಆಶ್ರಯ? ಯಾರಿಗೆ ಆಶ್ರಯ? ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಇವತ್ತು ಯಾವುದೇ ಅಪ್ರೂವಲ್ ಇಲ್ಲದೆ ಇವರು 3 ಯೋಜನೆಗಳನ್ನು ತೆಗೆಕೊಂಡಿದ್ದಾರೆ. ಮೈಸೂರಿನಲ್ಲಿ

ಗುಡ್ಡದಹಳ್ಳಿ ಹೌಸಿಂಗ್ ಪ್ರಾಜೆಕ್ಟ್. ಇಲ್ಲಿ 2000 ಮನೆಗಳನ್ನು ಕಟ್ಟಿಸಬೇಕು. ಈ ಕೆಲಸವನ್ನು ಕೊಟ್ಟಿದ್ದುದು ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ. ಇವರಿಗೆ 4 ಕೋಟಿ ರೂ.ಗಳನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಈ ಸ್ಕೀಂನ ಅಪ್ರೂವಲ್ ಆಗಿಲ್ಲ. ಇದರ ಪ್ರಾಜೆಕ್ಟ್ ರಿಪೋರ್ಟ್ ಇಲ್ಲ. ಯಾವುದೇ ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ ಕೂಡ ಇದಕ್ಕೆ ಮೋಸ ಮಾಡಿಲ್ಲ, ಸರ್ಕಾರ ಮಾನ್ಯತೆಯನ್ನು ಕೊಟ್ಟಿಲ್ಲ. ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ ಕೂಡ ಇದಕ್ಕೆ ಮಾನ್ಯತೆ ಕೊಟ್ಟಿಲ್ಲ. ಅಂದಮೇಲೆ ಯಾವ ಪ್ರಕಾರ ಈ ಸ್ಕೀಮನ್ನು ನೀವು ತೆಗೆದುಕೊಂಡಿರಿ. ಈ ಸ್ಕೀಮನ್ನು ತೆಗೆದುಕೊಳ್ಳುವುದಕ್ಕೆ ಯಾರು ಹೇಳಿದರು? 4 ಕೋಟಿ ರೂ. ಹಣವನ್ನು ಈ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪೆನಿಯವರಿಗೆ ಅಡ್ವಾನ್ಸ್ ಕೊಡುವುದಕ್ಕೆ ಇವರು ತೆಗೆದುಕೊಂಡಿದ್ದಾರೆ. ನನ್ನ ಮಾಹಿತಿಯ ಪ್ರಕಾರ ನಮ್ಮ ದೇಶದ ಪ್ರಧಾನ ಮಂತ್ರಿಗಳಿಗೆ ಇವರು ಬಹಳ ಸಮಿಪದವರು. ಈ ಕಂಟ್ರಾಕ್ಟರ್ ಯಾರಿದ್ದಾರೆ ಇವರು ಪ್ರಧಾನ ಮಂತ್ರಿಗಳಿಗೆ ಬಹಳ ಕ್ಲೋಸ್ ಆದವರು.

ಇನ್ನೊಂದು ಯೋಜನೆ ಎಂದರೆ ಕೆಂಗೇರಿ ಹೌಸಿಂಗ್ ಪ್ರಾಜೆಕ್ಟ್ ಇಲ್ಲಿ 2600 ಮನೆಗಳನ್ನು ಕಟ್ಟಿಸುವಂಥಾದ್ದು. ಈ ಯೋಜನೆಗೆ ಸಂಬಂಧಪಟ್ಟಂತೆ ಹೌಸಿಂಗ್ ಬೋರ್ಡ್‌ನಲ್ಲಿ ಒಂದು ಸಮಿತಿ ಇದೆ. ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚಿತವಾಗಿ ಆ ಸಮಿತಿಯವರು ಈ ಯೋಜನೆಯನ್ನು ಕ್ಲಿಯರ್ ಮಾಡಬೇಕು. ಆದರೆ ಆ ಸಮಿತಿಯ ಮುಂದೆ ಈ ಪ್ರಾಜೆಕ್ಟ್ ಬಂದಿಲ್ಲ. ಸರ್ಕಾರದಿಂದ ಅಪ್ರೂವಲ್ ಇಲ್ಲ, ಹುಡ್ಕೋ ಇದು ಮೋಸ ಮಾಡಿಲ್ಲ. ಯಾವುದೇ ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ ಮೋಸ ಮಾಡಿಲ್ಲ. ಇದೂ ಕೂಡ ಪುನಃ ಶಿರ್ಕೆಯವರಿಗೇ ಕೊಟ್ಟಿದ್ದಾರೆ. ಇದರ ಬಗ್ಗೆ 9 ಕೋಟಿ ರೂ.ಗಳನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಇದು ಯಾರ ಹಣ. ಈ ರೀತಿ ಹಣವನ್ನು ಹಂಚುತ್ತಾರೆಂದು ನಮಗೆ ಗೊತ್ತಿದಿದ್ದರೆ ನಾವೂ ಕೂಡ ಬರುತ್ತಿದ್ದೆವು. ನಮಗೆ ಇದು ಗೊತ್ತಾಗಲಿಲ್ಲ. ಈ ರೀತಿ ಮಾನ್ಯ ಕಾಗೋಡು ತಿಮ್ಮಪ್ಪನವರು ಹೌಸಿಂಗ್ ಬೋರ್ಡ್‌ನಲ್ಲಿ ಹಣವನ್ನು ಹಂಚುತ್ತಿದ್ದಾರೆಂದು ಗೊತ್ತಿದ್ದರೆ ನಾವೂ ಕೂಡ ಅಲ್ಲಿಗೆ ಹೋಗುವುದಕ್ಕೆ ಸಾಧ್ಯತೆ ಇತ್ತು. ಯಾವ ಬ್ಯಾಂಕ್‌ನವರೂ ಕೂಡ ಫೋಸ್ ಮಾಡದೇ ಇರುವಾಗ ಈ ಸ್ಕೀಂನ್ನು ನೀವು ಯಾವ ರೀತಿ ತೆಗೆದುಕೊಂಡಿರಿ? ಈ ಅಧಿಕಾರವನ್ನು ನಿಮಗೆ ಯಾರು ಕೊಟ್ಟರು? ಇದು ಅಧಿಕಾರದ ದೊಡ್ಡ ದುರುಪಯೋಗ.

ಇನ್ನು ಮ್ಮತ್ತೊಂದು ಸ್ಕೀಂ ಎಂದರೆ ಯಲಹಂಕದ್ದು. ಯಲಹಂಕದಲ್ಲಿ 3000 ಮನೆಗಳನ್ನು ಕಟ್ಟತಕ್ಕ ಕಾರ್ಯಕ್ರಮ. ಇಲ್ಲಿ 60 ಪರ್ಸೆಂಟ್ ಕೆಲಸವನ್ನು ಪುನಃ ಶಿರ್ಕೆಯವರಿಗೇ ಕೊಟ್ಟು 40 ಪರ್ಸೆಂಟ್ ಕೆಲಸವನ್ನು ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪೆನಿಯವರಿಗೇ ಕೊಟ್ಟಿದ್ದಾರೆ. ಹೀಗೆ ನಾಗಾರ್ಜುನ ಶಿರ್ಕೆ, ನಾಗಾರ್ಜುನ ಶಿರ್ಕೆ ಇವರಿಗೇ ಕೊಡುತ್ತಾ ಬಂದಿದ್ದಿರಿ. ಬೇರೆ ಕಂಟ್ರಾಕ್ಟರ್‌ಗಳೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲವೆ? ಒಬ್ಬ ಕಂಟ್ರಾಕ್ಟರ್ ಮಹಾರಾಷ್ಟ್ರದವನು, ಇನ್ನೊಬ್ಬ ಕಂಟ್ರಾಕ್ಟರ್ ಆಂಧ್ರಪ್ರದೇಶದವನು. ಆದರೆ ನಮ್ಮ ಕಂಟ್ರಾಕ್ಟರ್‌ಗಳಿಗೆ ಏನೂ ಕೊಟ್ಟಿಲ್ಲ. ನಮ್ಮವರು ದಿವಾಳಿಯಾಗಿದ್ದಾರೆಯೆ? ಯಾವ ಪ್ರೊಸೀಜರ್‌ನ್ನು ಫಾಲೋ ಮಾಡಿಲ್ಲ. ಯಾವ ಪ್ರಾಜೆಕ್ಟ್ ರಿಪೋರ್ಟ್ ಇಲ್ಲ. ಸರಕಾರದಿಂದ ಕ್ಲೀಯರೆನ್ಸ್ ಇಲ್ಲ. ಯಲಹಂಕದಲ್ಲಿ 3 ಸಾವಿರ ಮನೆಗೆಂದು ಹದಿಮೂರುವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, towards mobilisation advance and towards some running bills. ಇವರು ನ್ಯಾಷನಲ್ ಹೌಸಿಂಗ್ ಬ್ಯಾಂಕ್‌ಗೆ ಹೇಳಿದ್ದಾರೆ. ಯಲಹಂಕದಲ್ಲಿ ಸಾಕಷ್ಟು ಡಿಮಾಂಡ್ ಇದೆ. ಪ್ರಾಜೆಕ್ಟಿಗೆ ಫೈನಾನ್ಸ್ ಮಾಡಿ ಎಂದು. 4-5 ಬಾರಿ ಮನೆ ಬಗ್ಗೆ ಅಡ್ವರ್ಟೈಸ್ ಮಾಡಿದಿರಿ. 200 ಅರ್ಜಿಗಳು ಬಂದಿದೆ. ಆ 200 ಜನರು ಈಗ ರೀಫಂಡ್ ಕೇಳುತ್ತಿದ್ದಾರೆ ನಮಗೆ ಮನೆ ಬೇಡ ಹಣ ಕೊಡಿ ಎಂದು. "There is tremendous demand for this Project" ಬಹಳ ಜನ ಅರ್ಜಿಗಳನ್ನು ಕೊಟ್ಟಿದ್ದಾರೆ ನಮಗೆ ಫೈನಾನ್ಸ್ ಮಾಡಿ ಎಂದು ಹೇಳಿದ್ದಾರೆ. National Housing Bank will not finance the project. ಅವರಿಗೆ ಗೊತ್ತಾಗಿದೆ ಇಲ್ಲಿ ಮನೆಗೆ ಡಿಮ್ಯಾಂಡ್ ಇಲ್ಲವೆಂದು, ಹಾಗಾದರೆ ಈ

ಕೆಂಗೇರಿ, ಯಲಹಂಕ, ಗುಡ್ಡದಹಳ್ಳಿಯ project costs about Rs.185/- crores. ಕೆಂಗೇರಿ ಹೌಸಿಂಗ್ ಪ್ರಾಜೆಕ್ಟಿಗೆ 60 ಕೋಟಿ ಮೈಸೂರು, ಗುಡ್ಡದಹಳ್ಳಿಗೆ 60 ಕೋಟಿ ಯಲಹಂಕಗೆ 65 ಕೋಟಿ ಒಟ್ಟು 185 ಕೋಟಿಗಳ 3 ಕಾರ್ಯಕ್ರಮಗಳನ್ನು ತೆಗೆದುಕೊಂಡಿರಿ. ಸರಕಾರದಿಂದ ಒಂದು ಹೌಸಿಂಗ್ ಪ್ರಾಜೆಕ್ಟ್ ಕ್ಲಿಯರ್ ಆಗಿಲ್ಲ. ಒಂದಕ್ಕೂ ಹೌಸಿಂಗ್ ಪ್ರಾಜೆಕ್ಟ್ ರಿಪೋರ್ಟ್ ಇಲ್ಲ. ಯಾರದ್ದೂ ಅಪ್ರೂವಲ್ ಇಲ್ಲ, ಸರಕಾರದಿಂದ ಫಂಡಿಂಗ್ ಇಲ್ಲ. ಫೈನಾನ್ಸ್ ಇನ್‌ಸ್ಟಿಟ್ಯೂಷನ್ ಆಗಲೀ ಹುಡ್ಕೋ ಆಗಲೀ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಆಗಲೀ ಇವತ್ತು ಅಪ್ರೂವಲ್ ಇಲ್ಲ. National Housing Bank has also not financed. ಇವತ್ತು ಕಂಟ್ರಾಕ್ಟರ್ಸ್ ಮೊಬಿಲೈಸೇಷನ್ ಅಡ್ವಾನ್ಸ್ ತೆಗೆದುಕೊಂಡಿದ್ದಾರೆ ಕೆಲವು ಕಡೆ ಪ್ರಾರಂಭ ಮಾಡಿದ್ದಾರೆ ಕೆಲವು ಕಡೆ ರನ್ನಿಂಗ್ ಬಿಲ್ ತೆಗೆದುಕೊಂಡಿದ್ದಾರೆ ಅದಕ್ಕೆ ಗ್ಯಾರಂಟಿ ಇಲ್ಲ ಅದಕ್ಕೆ ಸೆಕ್ಯೂರಿಟಿ ಇಲ್ಲ ಯಾವ ಕಂಟ್ರಾಕ್ಟರಿಗೆ ಕೆಲಸ ಕೊಟ್ಟಿದ್ದಾರೆ ಅದಕ್ಕೆ ಪ್ರೊಸೀಜರ್ ಇಲ್ಲ. ಪ್ರೊಸೀಜರಲ್ ಟೆಂಡರ್ ಇಲ್ಲ. ಪರಿಸ್ಥಿತಿ ಏನಾಗಿದೆ ಹೌಸಿಂಗ್ ಬೋರ್ಡ್ ಇವತ್ತೋ ನಾಳೆಯೋ ಬಾಗಿಲು ಹಾಕತಕ್ಕ ಸ್ಥಿತಿಗೆ ಬಂದಿದೆ. They have no money to pay salaries today. There is financial crisis. How are they going to finance these projects now? ಹಣ ಎಲ್ಲೆಲ್ಲಿ ಬರುವುದು ಇದೆ, ಸರಕಾರದಿಂದ, ಹುಡ್ಕೋದಿಂದ, ನ್ಯಾಷನಲ್ ಹೌಸಿಂಗ್ ಬ್ಯಾಂಕ್‌ನಿಂದ ಹಣ ಬಂದರೆ projects can take off. ತೆಗೆದುಕೊಳ್ಳಬಹುದು. ಯಾವ ಪ್ರಾಜೆಕ್ಟಿಗೂ ಪ್ರಾಜೆಕ್ಟ್ ರಿಪೋರ್ಟ್ ಇಲ್ಲ. ಯಾವ ಪ್ರಾಜೆಕ್ಟಿಗೂ ಟೆಕ್ನಿಕಲ್ ಕಮಿಟಿ ಕ್ಲಿಯರ್ ಮಾಡಿಲ್ಲ. ಯಾವ ಪ್ರಾಜೆಕ್ಟಿಗೂ ಸರಕಾರದ ಮಾನ್ಯತೆ ಇಲ್ಲ ಇದು ಹೇಗೆ ಸಾಧ್ಯ ಇದೆ. ಹಾಗಾಗಿ this is the biggest scandal of this century. ಬಡ ಜನರಿಗೆ ಮನೆ ಕೊಡಬೇಕೆಂಬ ಅಭಿಲಾಷೆ ಇದ್ದರೆ ಈ ಪ್ರಕಾರ ಕಾರ್ಯಕ್ರಮ ಹಾಕಿಕೊಂಡರೆ ಅದು ಆಗುವುದಿಲ್ಲ. ಸರಕಾರದಿಂದ ಏನು ಹಣ ಬಿಡುಗಡೆಯಾಗಿದೆ ಅದರಲ್ಲಿ ಮಿಸ್ ಅಪ್ರೊಪ್ರಿಯೇಷನ್ ಆಫ್ ಫಂಡ್ಸ್ ಆಗಿದೆ, ಮಿಸ್ ಯೂಸ್ ಆಗಿದೆ, ಮಿಸ್ ಯೂಟಿಲೈಸ್ ಆಗಿದೆ, ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಅಂಬೇಡ್ಕರ್ ಮತ್ತು ಆಶ್ರಯ ಯೋಜನೆಯಲ್ಲಿ ಹಣ ರಿಲೀಸ್ ಮಾಡಿದರು ಅದನ್ನು ಡೈವರ್ಟ್ ಮಾಡುವ ಅಧಿಕಾರ ಹೌಸಿಂಗ್ ಬೋರ್ಡಿಗೂ ಇಲ್ಲ. ತಾವು ಆಜ್ಞೆ ಕೊಟ್ಟಿದ್ದೀರಾ? ಸರಕಾರ ಕೊಟ್ಟಿದೆ ನಾವು ಡೈವರ್ಟ್ ಮಾಡಿದ್ದೇವೆಂದು ಹೇಳಲಿ ಅವರು. ಅದೂ ನಿಮ್ಮ ಹತ್ತಿರ ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ಹೌಸಿಂಗ್ ಬೋರ್ಡ್ ಇದೆ. ಜನ ಯಾರು ನಮಗೆ ಮನೆ ಸಿಗಬಹುದೆಂದು ಕಾಯುತ್ತಿದ್ದಾರೆಯೋ ಅವರಿಗೆ ಇವತ್ತು ಮೋಸ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಹಾಗಾಗಿ ಇವತ್ತು ಇಂತಹ ಒಂದು ಸ್ಕ್ಯಾಂಡಲ್ ನಮ್ಮ ರಾಜ್ಯದ ಇತಿಹಾಸದಲ್ಲಿ ಯಾವಾಗಲೂ ಆಗಿಲ್ಲ. ಹಾಗಾಗಿ ನಾನು ಸರಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ಇದರ ಬಗ್ಗೆ ಸಿ.ಬಿ.ಐ. ಆರ್ಡರ್ ವಿಚಾರಣೆ ಮಾಡಿಸಬೇಕು. ಬಹಳಷ್ಟು ಕಂಟ್ರಾಕ್ಟರ್ಸ್ ಬೇರೆ ಬೇರೆ ರಾಜ್ಯದವರು ಇದ್ದಾರೆ. ಮಹಾರಾಷ್ಟ್ರದವರು, ಆಂಧ್ರದವರು ಇದ್ದಾರೆ. ನಮ್ಮ ಪೋಲೀಸರಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ನಾಗರಾಜನ್ ಯಾರು ಕಂಟ್ರಾಕ್ಟರ್ ಇದ್ದಾರೆ ಅವರಿಗೆ ಏಕೆ ಹಣ ಕೊಟ್ಟರು? ಶಿರ್ಕೆಯವರಿಗೆ ಏಕೆ ಮೆಷಿನರಿಗೆ ಆರ್ಡರ್ ಕೊಟ್ಟರು. ಈ ಮೂರು ಪ್ರಾಜೆಕ್ಟನ್ನು ಯಾರು ತೆಗೆದುಕೊಂಡರು. ಇದರಿಂದ ಹೌಸಿಂಗ್ ಬೋರ್ಡಿಗೆ ಲಾಭ, ಹಾನಿ ಏನಾಯಿತು ಇದರ ಬಗ್ಗೆ ವಿಚಾರಣೆಯಾಗಬೇಕು. ಅದರ ಪ್ರಕಾರ ಎಂಟೈರ್ ಅಫೈರ್ಸ್ ಬಗ್ಗೆ ಹೌಸಿಂಗ್ ಬೋರ್ಡ್ ಬಗ್ಗೆ ವಿಚಾರವಾಗಬೇಕಾಗುತ್ತದೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನಂತಹ ವ್ಯಕ್ತಿ ಅಲ್ಲಿ ಇದ್ದಾಗ ಅವರು ಹೌಸಿಂಗ್ ಬೋರ್ಡನ್ನು ಈ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಾರೆಂದು ನಾವು ಕಲ್ಪನೆ ಕೂಡ ಮಾಡಿರಲಿಲ್ಲ. ಅವರು ಈ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. He cannot shirk the responsibility, He cannot say the Officers have done it. It is his responsibility. What I say now will be replied and what I say are the facts

and if these are facts, I demand a public apology from him. ಏತಕ್ಕೆಂದರೆ ಈ ರೀತಿಯಾದ ಕೆಲಸ ಹೌಸಿಂಗ್ ಬೋರ್ಡ್‌ನಲ್ಲಿ ಯಾವಾಗಲೂ ಆಗಿಲ್ಲ. ಈ ಮಟ್ಟಕ್ಕೆ ಹೌಸಿಂಗ್ ಬೋರ್ಡ್‌ನ್ನು ಯಾರೂ ತೆಗೆದುಕೊಂಡು ಹೋಗಲಿಲ್ಲ. ಮಾಜಿ ಮುಖ್ಯಮಂತ್ರಿಗಳು ನಮ್ಮವರು ಇದ್ದಾರೆ, ಅವರದು ನೇರವಾಗಿ ನಮಗೆ ಶೆಲ್ಟರ್ ಇದೆ, ಏನೇನೋ ಮಾಡಬಹುದು, ನಡೆಯುತ್ತದೆ, ಫೈನಾನ್ಸ್ ಕಮಿಷನರ್‌ದು ನಡೆಯುತ್ತಿರಲಿಲ್ಲ, ಹೆಚ್.ಯು.ಡಿ. ಸೆಕ್ರಿಟರಿಯವರದೂ ನಡೆಯುತ್ತಿರಲಿಲ್ಲ, ಹೌಸಿಂಗ್ ಕಮೀಷನರದೂ ನಡೆಯುತ್ತಿರಲಿಲ್ಲ. ಹಾಗಾಗಿ ಇದರ ಬಗ್ಗೆ ತನಿಖೆಯಾಗಬೇಕು. ಮತ್ತು ಯಾವ ಅಧಿಕಾರಿ ಮೇಲೆ ಇದರ ಜವಾಬ್ದಾರಿ ಇದೆ, ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾರು ನಾನ್ ಅಫಿಷಿಯಲ್ ಜವಾಬ್ದಾರಿ ಇರುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು ಒಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಲಿಲ್ಲವಾದರೆ, ಚುನಾವಣೆಗೆ ಹೋದಾಗ ಸರಿಯಾಗಿ ಜನ ನಿಮಗೆ ಉತ್ತರ ಕೊಡುತ್ತಾರೆ. ಈಗಾಗಲೇ ನಿಮಗೆ ಗೊತ್ತಾಗಿದೆ. ಇನ್ನೂ ಹಲವಾರು ವಿಷಯಗಳು ಇವೆ. ಅದಕ್ಕೆ ನಾವು ಬೇರೆ ನೋಟೀಸ್ ಕೊಟ್ಟಿದ್ದೇವೆ. ಗ್ರಾನೈಟ್ ಬಗ್ಗೆಯಾಗಲಿ, ಡಿ.ಎಲ್.ಎಂ. ಬಗ್ಗೆಯಾಗಲಿ ಈ ವಿಚಾರಗಳು ಸಹ ಪ್ರಸ್ತಾಪವಾಗಬೇಕಾಗಿತ್ತು. ಅದರ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಆದರೆ ಸಮಯ ಅಭಾವದಿಂದ ಅವುಗಳನ್ನು ಹೆಚ್ಚು ಟಚ್ ಮಾಡುತ್ತಿಲ್ಲ. ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ತಾವು ಕ್ಲೀನ್ ಗೌವರ್ನಮೆಂಟ್ ಕೊಡುತ್ತೇವೆಂದು ಹೇಳಿದಿರಿ, ಓಪನ್ ಗೌವರ್ನಮೆಂಟ್ ಕೊಡುತ್ತೇವೆಂದು ಹೇಳಿದಿರಿ. ಎಲ್ಲೆಲ್ಲಿ ಭ್ರಷ್ಟಾಚಾರ ಇದೆ ಅಲ್ಲೆಲ್ಲಾ ವಿಚಾರಣೆ ಮಾಡುತ್ತೇವೆ, ಭ್ರಷ್ಟಾಚಾರ ನಿರ್ಮೂಲನೆಯ ಬಗ್ಗೆ ಎಲ್ಲಾ ಬ್ರೇಕ್ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಮಾಡಬೇಕಾದರೆ ಕೇವಲ ತಿಪ್ಪನಗೊಂಡನಹಳ್ಳಿ ಕೇಸ್‌ನಲ್ಲಿ ರಿಟ್ ಅಪೀಲ್ ವಿತ್‌ಡ್ರಾ ಮಾಡಿದರೆ ಆಗುವುದಿಲ್ಲ. ಯಾರು ಆ ಪ್ರಾಜೆಕ್ಟನ್ನು ತಯಾರು ಮಾಡಿದರು ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ಗ್ರಾನೈಟ್, 200 ಲೀಸಸ್ ಓವರ್ ನೈಟ್ ಕೊಟ್ಟರು ಅವರು ಯಾವ ಬೆನಿಫಿಷಿಯರ್ಸ್, ಅಪ್ಲಿಕೇಷನ್ ಹೇಗೆ ಬಂದಿತು. ಯಾರು ಅದನು ಫೋರಸ್ ಮಾಡಿದರು. ಏನು ಅವಶ್ಯಕತೆ ಇತ್ತು 204 ಲೀಸಸ್ ಓವರ್‌ನೈಟ್ ಕೊಡುವುದಕ್ಕೆ? ಇವತ್ತು ಹೈಕೋರ್ಟ್ ಸಹ ತಮ್ಮ ಲೀಸಸ್ ಸೆಟ್‌ಅಸೈಡ್ ಮಾಡಿದೆ. ಇದರ ಬಗ್ಗೆ ತಾವು ಎನ್‌ಕ್ವಯರಿ ಮಾಡಬೇಕಾಗುತ್ತದೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಕ್ರಮ ಅಂದರೆ ವಿತ್‌ಡ್ರಾ ಮಾಡುವುದಿಲ್ಲ. ಅದಲ್ಲ ಮೇಜರ್ ಆಪರೇಷನ್. ಆ ಪ್ರಕಾರ ಮೇಜರ್ ಆಪರೇಷನ್ ಮುಖ್ಯಮಂತ್ರಿಯವರು ನಿಜವಾದ ಆಪರೇಷನ್ ಎಂದು ತಿಳಿದುಕೊಂಡರೆ ಅವರು ಈ ಸ್ಥಾನದಲ್ಲಿ ಹೆಚ್ಚು ದಿವಸ ಇರುವುದಿಲ್ಲ. ಹಾಗಾಗಿ ಇದರ ಬಗ್ಗೆ ವಿಚಾರಣೆಯಾಗಬೇಕು. ಮತ್ತೊಂದು ವಿಚಾರ ಮಾನ್ಯ ಅಧ್ಯಕ್ಷರೇ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬಿ.ಡಿ.ಎ.ಯಲ್ಲಿ ಕೆಲವು ನಿರ್ಣಯ ತೆಗೆದುಕೊಂಡು, ಕೆಲವು ಸೈಟ್ಸ್‌ಗಳನ್ನು ಕೊಟ್ಟರು, ಕೆಲವು ಸಿ.ಎ.ಸೈಟ್ಸ್ ಕೊಟ್ಟರು. ಅದರ ಬಗ್ಗೆ ಮಾನ್ಯ ಸರ್ಕಾರದವರು ಕ್ರಮ ತೆಗೆದುಕೊಂಡಿರುತ್ತಾರೆ. ಆದರೆ ಡಿಸಿಶನ್ ಫ್ರೀಜ್ ಮಾಡಿದ್ದಾರೆ. ಹೌಸಿಂಗ್ ಬೋರ್ಡ್‌ನ ಗೋಡೌನ್‌ಗೆ ಕೊಟ್ಟಿದ್ದಾರೆ, ಸೈಟ್ಸ್ ಕೊಟ್ಟಿದ್ದಾರೆ. ಮನೆಗಳನ್ನು ಕೊಟ್ಟಿದ್ದಾರೆ. ಹೇಗೆ ಕೊಟ್ಟರು? ಅದೆಲ್ಲ ತನಿಖೆಯಾಗಬೇಕಾಗಿದೆ. ಸರ್ಕಾರ ಅದರ ಬಗ್ಗೆಯೂ ಡಿಸಿಷನ್ ಫ್ರೀಜ್ ಮಾಡಬೇಕಾಗುತ್ತದೆ. ಕೇವಲ ಬಿ.ಡಿ.ಎ.ಯಿಂದ ಅಲ್ಲ ಹೌಸಿಂಗ್ ಬೋರ್ಡಿನಿಂದ ಏನು ನಿರ್ಣಯ ಕಳೆದ ಎರಡೂ ವರ್ಷದಲ್ಲಿ ಆಗಿವೆ, ಛೀವು ಏನು ಸೈಟುಗಳನ್ನು ಕೊಟ್ಟಿರಿ ಅದು ಫ್ರೀಸ್ ಆಗಬೇಕಾಗುತ್ತದೆ, ಪ್ರತಿಯೊಂದು ಡಿಸಿಶನ್ ತಾವು ವೆರಿಫೈ ಮಾಡಬೇಕಾಗುತ್ತದೆ, ಪರಿಶೀಲನೆ ಮಾಡಬೇಕಾಗುತ್ತದೆ. ಪರಿಶೀಲನೆ ಮಾಡಿ ಅವರು ಯೋಗ್ಯರಿದ್ದಾರೆ ಒಪ್ಪಿಕೊಳ್ಳುತ್ತೇನೆ, ಕೊಡಿ. ಮನೆ ಕಟ್ಟಲಿಕ್ಕೆ ನಿವೇಶನಗಳನ್ನು ಕೊಡಲಿಕ್ಕೆ ಹೌಸಿಂಗ್ ಬೋರ್ಡ್ ಇದೆ. ಜನರಿಗೆ ಕಷ್ಟ ಕೊಡಲಿಕ್ಕೆ ಅಲ್ಲ. ಆದರೆ, ನನಗೆ ಯಾರದೋ ಪರಿಚಯವಿದೆ, ನನ್ನದು ಇನ್‌ಫ್ಲೂಯನ್ಸ್ ಇದೆ ಎಂದು ಹೇಳಿ ಸೈಟ್ಸೈಟ್ ತೆಗೆದುಕೊಳ್ಳುವುದು,

ಗೋಡೌನ್‌ಗಳನ್ನು ತೆಗೆದುಕೊಳ್ಳುವುದು, ಮನೆಗಳನ್ನು ತೆಗೆದುಕೊಳ್ಳುವುದು ಅದು ಸರಿಯಲ್ಲ. ಇವತ್ತು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ, ಯಾರು ಅಧಿಕಾರದಲ್ಲಿದ್ದಾರೆ, ಆ ಜನರದು ಇನ್ವಾಲ್‌ಮೆಂಟ್ ಇದೆ. ಅವರಿಗೂ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ಹೌಸಿಂಗ್ ಬೋರ್ಡ್‌ನಲ್ಲಿ ಏನು ಆಕ್ಟಿವಿಟೀಸ್ ಆಗುತ್ತಿದೆ, ಏನು ಸೈಟ್ಸ್ ಕೊಟ್ಟಿದ್ದಾರೆ ಅದರ ಬಗ್ಗೆ ವಿಚಾರಣೆಯಾಗಬೇಕಾಗಿದೆ. ಯಾವ ಪ್ರಕಾರವಾಗಿ ಬಿ.ಡಿ.ಎ.ನಲ್ಲಿ ಫ್ರೀಸ್ ಮಾಡಿದಿರಿ, ಅದೇ ಪ್ರಕಾರ ಇಲ್ಲಿಯ ಫ್ರೀಸ್ ಮಾಡಿ. ಕಳೆದ ಎರಡು ವರ್ಷಗಳಲ್ಲಿ ಏನು ಡಿಸಿಷನ್ ತೆಗೆದುಕೊಂಡಿರಿ ಫ್ರೀಸ್ ಮಾಡಿ. ಡಿಸಿಷನ್ ರೆವ್ಯೂ ಮಾಡಿ. ಇದರ ಬಗ್ಗೆ ನಾನು ಸಿ.ಬಿ.ಐ. ತನಿಖೆಯನ್ನು ಕೇಳುತ್ತಿದ್ದೇನೆ. ಸರ್ಕಾರ ಇದಕ್ಕೆ ಒಪ್ಪಿಕೊಂಡಿಲ್ಲವೆಂದರೆ ತಮಗೆ ಎನ್‌ಕ್ವಯರಿ ಮಾಡಲು ಇಚ್ಛೆಯಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಸಮಯದ ಅಭಾವದಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ದೇಶದ ಪ್ರೈಮಿನಿಸ್ಟರ್ ಮತ್ತು ನಿಮ್ಮ ಪಕ್ಷದ ಅಧ್ಯಕ್ಷರು ಮಾನ್ಯ ನರಸಿಂಹರಾಯರಿಗೆ ಕೊಟ್ಟ ಮೆಮೊರ್ಯಾಂಡಮ್ ನನ್ನ ಕೈಯಲ್ಲಿದೆ. Karnataka Bandh; Demolition of Private Property in Brigade Road; Increasing the Contingency Fund Limit; Indiscriminate exemptions under Urban Land Ceiling Act; Irresponsible Statements on the topic of Tippu Serial on Doordarshan; Conflicting Announcements during International Film Festival; Exemption under Urban Land Ceiling Act in respect of Century-Galaxy; Grant of exemption under Urban Land Ceiling Act in respect of M/s.Ramaiah; De-notification of lands in favour of Mohan Meakins; favouritism shown to NIT Housing Co-operartive Society; Granite Mining 206 licences issued overnight.

5-40 P.M.

> "Karnataka High Court quashing the Government Order as illegal; scandals of denotification of the land relating to House Building Co-operative Societies; corruption in transfer of officers, partial arrangement to invest ill-gotton money, scandals of M/s.Universal Ltd., New Delhi; waving of Rs.36 crores; withdrawing of powers given to the Central Government; proposal to sell public sector undertaken.."

and so many other things. ಈ ರಿಪೋರ್ಟ್ ಏನಿದೆ ಇದರಲ್ಲಿ ಸಿಗ್ನೇಚರ್ಸ್ ಇವೆ. ಹಾಗಾಗಿ ನಾನು ಇದನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಡುತ್ತಿದ್ದೇನೆ. It is not only the document which has...

DR.JEEVARAJ ALVA:- My suggestion through the Chair is, it can be placed in the House. Let it be part of the proceedings.

ಶ್ರೀ ಜಿ.ಎಸ್. ಶಿವನಂಜಪ್ಪ:- ಪ್ರಧಾನ ಮಂತ್ರಿಗಳಿಗೆ ಕೊಟ್ಟದ್ದು ನಿಮ್ಮ ಕೈಗೆ ಹೇಗೆ ಬಂತು?

ಡಾ|| ಜೀವರಾಜ್ ಆಳ್ವ:- ಅದರಲ್ಲಿ ಬಹಳಷ್ಟು ಜನ ಸದಸ್ಯರ ಸಿಗ್ನೇಚರ್ಸ್ ಇದೆ. It is a very very vital document. Let it be part of the proceedings.

ಶ್ರೀ ಆರ್.ವಿ. ದೇಶಪಾಂಡೆ:- ಯಾರು ಕೊಟ್ಟರು ಎಂದು ನಿಮಗೆ ಏಕೆ? Why should I not get it from Delhi?

ಶ್ರೀ ಕೆ.ಎಸ್. ಈಶ್ವರಪ್ಪ:- ಭ್ರಷ್ಟಾಚಾರ ಹೌದು ತಾನೆ? ಭ್ರಷ್ಟಾಚಾರದ ಬಗ್ಗೆ ಯೋಚನೆ ಮಾಡುವುದು ಬಿಟ್ಟು ನಿಮಗೆ ಹೇಗೆ ಬಂತು ಎನ್ನುತ್ತಿದ್ದೀರಲ್ಲ ನಿಮಗೆ ನಾಚಿಕೆಯಾಗುವುದಿಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ:- ಇವತ್ತು ಕಾಂಗ್ರೆಸ್ ಪಕ್ಷ ಏನು ಮೇಜರ್ ಆಪರೇಷನ್ ಮಾಡುತ್ತೇವೆಂದು ಬಂಗಾರಪ್ಪನವರ ವಿರುದ್ಧ ಹೋರಾಟ ಮಾಡಿದರಲ್ಲ, ಮೆಮೋರ್‍ಯಾಂಡಂ ಕೊಟ್ಟರಲ್ಲ ಅದೇ ಮೆಮೋರ್‍ಯಾಂಡಂ ಅನ್ನು ಮಾನ್ಯ ಅಧ್ಯಕ್ಷರ ಕೈಗೆ ಕೊಡುತ್ತಿದ್ದೇನೆ. Because I want this to be the House property. ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. You are all parties to this. You are all signatories to this. ಅದರ ಬಗೆ ವಿಚಾರಣೆ ಆಗಬೇಕಾಗುತ್ತದೆ. ಹಾಗಾಗಿ ನಾನು ಇದನ್ನು ಮಾನ್ಯ ಅಧ್ಯಕ್ಷಣೆಗೆ ಕಳುಹಿಸಿಕೊಡುತ್ತೇನೆ. ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ಹೊಸದಾಗಿ ಮಂತ್ರಿಯಾಗಿದ್ದೀರಿ. ಅನುಭವ ಚೆನ್ನಾಗಿದೆ. ರಾಜ್ಯದ ಮತ್ತು ಪಕ್ಷದ ಹಿತದೃಷ್ಟಿಯಿಂದ ಏನು ಪ್ರೂವ್ ಆಗಿದೆ ಅದರ ಬಗ್ಗೆ ಎನ್‌ಕ್ವೈರಿ ಮಾಡುತ್ತೀರೆಂದು ಭಾವಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಕೆ.ಜೆ. ಜಾರ್ಜ್ (ಭಾರತೀನಗರ):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಆಶ್ರಯ ಕಾರ್ಯಕ್ರಮದ ವಿಚಾರದಲ್ಲಿ ಸಾಕಷ್ಟು ಮಾತನಾಡಿದ್ದಾರೆ. ನಾನು ಹಿಂದಿನ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರಿಂದ ಈ ವಿಚಾರದಲ್ಲಿ ಒಂದೆರಡು ವಿಚಾರಗಳ ಬಗ್ಗೆ ಮಾತನಾಡಬಯಸುತ್ತೇನೆ. ಮಂತ್ರಿಗಳು ಏನು ಮಾಡುತ್ತಿದ್ದರು, ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು ಎಂದು ಕೇಳಿದರು. ಆಶ್ರಯ ಯೋಜನೆಯಲ್ಲಿ ಎರಡು ವಿಧ ಇದೆ. ಒಂದು, ನಿವೇಶನ ಇಲ್ಲದವರಿಗೆ ನಿವೇಶನ ಕೊಡುವ ಕಾರ್ಯಕ್ರಮ. ಕರ್ನಾಟಕ ರಾಜ್ಯದಲ್ಲಿ 8 ಲಕ್ಷ ಜನ ನಿವೇಶನರಹಿತರು ಇದ್ದಾರೆಂದು ಗುರುತಿಸಿ ನಿವೇಶನ ಕೊಡಬೇಕೆಂಬ ದೊಡ್ಡ ಕಾರ್ಯಕ್ರಮ ಹಾಕಿ, ಅದರಲ್ಲಿ ಐದೂವರೆ ಲಕ್ಷ ಜನರಿಗೆ ನಿವೇಶನ ಕೊಡುವಂತ ಕಾರ್ಯಕ್ರಮವನ್ನು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಹಾಕಿಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮ ಇಡೀ ರಾಷ್ಟ್ರದಲ್ಲಿ ದಾಖಲೆಯಾಗಿದೆ. ಈ ವಿಚಾರದಲ್ಲಿ ನಾವು ಏನು ಮಾಡಿದ್ದೇವೆಂದರೆ, ಆ ಸಂದರ್ಭದಲ್ಲಿ ಪ್ರತಿಯೊಂದು ವಿಧಾನಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ ಅದರಲ್ಲಿ ಬಿಡಿಓ ಅವರನ್ನು ಸೆಕ್ರೆಟರಿಯಾಗಿ ಮಾಡಿ ಬೇರೆ ಬೇರೆಯವರನ್ನು ಸದಸ್ಯರನ್ನಾಗಿ ಮಾಡಿ ದೊಡ್ಡ ಕಾರ್ಯಕ್ರಮ ಹಾಕಿ, ಇಡೀ ಕರ್ನಾಟಕ ರಾಜ್ಯದಲ್ಲೇ ಯಶಸ್ವಿಯಾದ ಕಾರ್ಯಕ್ರಮವನ್ನಾಗಿ ಮಾಡಿದೆವು. ದಿ ಪೀಪಲ್ ಹೌಸಿಂಗ್ ಸ್ಕೀಂ ಏನಿತ್ತು ಅದನ್ನು 1977-78ರಲ್ಲಿ ನಿಲ್ಲಿಸಿ ಬಿಟ್ಟರು. ಆ ಸಮಯದಲ್ಲಿ 8 ಸಾವಿರ ರೂಪಾಯಿಗಳಿಗೆ ಮನೆ ಕಟ್ಟುವ ಕಾರ್ಯಕ್ರಮ ಇತ್ತು. ದೇವರಾಜ ಅರಸು ಅವರ ಕಾಲದಲ್ಲಿ ಜನತಾ ಹೌಸಸ್ ಕಟ್ಟುವ ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮದ ಪ್ರಕಾರ ಮನೆಗಳನ್ನು ಕಟ್ಟುವುದನ್ನು ನೋಡಿದ್ದೇವೆ. ಆಮೇಲೆ ಏನಾಯಿತೆಂದರೆ, ಯಾವುದೇ ಕಾರ್ಯಕ್ರಮ ತೆಗೆದುಕೊಂಡರೂ ಬಿಡಿಓ ಮಾಡಲಿ ಡಿ.ಸಿ. ಮಾಡಲಿ, ಹೌಸಿಂಗ್ ಬೋರ್ಡ್ ಮಾಡಲಿ ಎನ್ನುವ ಅಭಿಪ್ರಾಯ ಇತ್ತು. ಕೊನೆಯದಾಗಿ ಯಾರಾದರೂ ಕಂಟ್ರಾಕ್ಟರ್ ಆ ಕೆಲಸವನ್ನು ಮಾಡಲೇಬೇಕಾಗುತ್ತದೆ. ಆ ಮನೆಗಳಿಗೆ ಹಾಕಿದ ಮರ ಮುಟ್ಟುಗಳನ್ನು ನೋಡಿದ್ದೇವೆ. ಹಸಿ ಮರಗಳು, ಸಾಫ್ಟ್ ವುಡ್ ಎಂದು ಏನು ಕರೆಯುತ್ತೇನೆ ಅದು. ಅದರಲ್ಲಿ ಮನೆ ಕಟ್ಟಿ 6 ತಿಂಗಳಲ್ಲಿ ಬೀಳುವ ಪರಿಸ್ಥಿತಿಯನ್ನು ನೋಡಿದ್ದೇವೆ. ಇದರ ಬಗ್ಗೆ ಮಂತ್ರಿ ಮಂಡಲದಲ್ಲಿ ಚರ್ಚೆ ಮಾಡಿ ಪ್ರೀ ಫ್ಯಾಬ್ರಿಕೇಟೆಡ್ ಟೆಕ್ನಾಲಜಿ ಪ್ರಕಾರ ಮನೆ ಕಟ್ಟಿದರೆ 30-40 ವರ್ಷ ಬಾಳಿಕೆ ಬರುತ್ತದೆ ಮತ್ತು ಪ್ರತಿಯೊಬ್ಬರಿಗೂ 200 ಸ್ಕ್ವೇರ್ ಫೀಟ್ ಮನೆ ಕಟ್ಟಿಸಿಕೊಡಬೇಕೆಂದು ನಿರ್ಣಯ ತೆಗೆದುಕೊಂಡು ಅದಕ್ಕೆ ಒಂದು ರೇಟ್ ಫಿಕ್ಸ್ ಮಾಡಿದ್ದೇವೆ. 15 ಸಾವಿರ ರೂಪಾಯಿಗಳನ್ನು ಮಾಡಬೇಕೆಂದು ಒಂದು ರೇಟ್ ಫಿಕ್ಸ್ ಮಾಡಿದ್ದೇವೆ. ಜಿಲ್ಲಾಪರಿಷತ್ತಿನವರು ಮೊದಲು ಮನೆ ಕಟ್ಟುವ ಸಂದರ್ಭದಲ್ಲಿಯೂ ಕೂಡ ಹೌಸಿಂಗ್ ಬೋರ್ಡ್ ನೋಡಲ್ ಏಜೆನ್ಸಿ ಆಗಿತ್ತು. ಹಳೆಯ ಮನೆಗಳನ್ನು ಕಂಪ್ಲೀಟ್ ಮಾಡಬೇಕೆಂದರೆ, ಹುಡ್ಕೋದಿಂದ ಸಬ್ಸಿಡಿ ಬರಬೇಕಾಗಿದ್ದರೆ ಈ ಕಂಪ್ಲೀಷನ್ ಸರ್ಟಿಫಿಕೇಟ್ ಬರಬೇಕಾಗಿತ್ತು.

ಅದು ಜಿಲ್ಲಾಪರಿಷತ್ತಿನಿಂದ ಹೌಸಿಂಗ್ ಬೋರ್ಡ್‌ಗೆ ಬಂದು ಅದನ್ನು ಹುಡ್ಕೋದಿಂದ ಕಳುಹಿಸಬೇಕಾಗಿತ್ತು. ಹಲವಾರು ಜಿಲ್ಲಾಪರಿಷತ್ತುಗಳು ಕಂಪ್ಲೀಷನ್ ಸರ್ಟಿಫಿಕೇಟ್ ಕೊಟ್ಟಿಲ್ಲ. ಕೋಟಿಗಟ್ಟಲೆ ನಮಗೆ ಸಬ್ಸಿಡಿ ರೂಪದಲ್ಲಿ ಬರಬೇಕೆಂದಿದ್ದರೂ ಕೂಡ ಹುಡ್ಕೋದಿಂದ ಸರ್ಟಿಫಿಕೇಟ್ ಇಲ್ಲದ ಪ್ರಯುಕ್ತ ಕೊಡಲಿಲ್ಲ. ಈ ಉದ್ದೇಶದಿಂದ ಹೌಸಿಂಗ್ ಬೋರ್ಡ್‌ನ ರೂರಲ್ ಮತ್ತು ಅರ್ಬನ್ ಪ್ರತಿಯೊಂದಕ್ಕೂ ಆಶ್ರಯ ಸ್ಕೀಮ್‌ಗೆ ಹೌಸಿಂಗ್ ಬೋರ್ಡ್‌ನ್ನು ನೋಡಲ್ ಏಜೆನ್ಸಿ ಮಾಡಿದೆವು. ದೇಶಪಾಂಡೆಯವರು ಮಾತನಾಡುತ್ತಾ, ಕಾಂಟ್ರಾಕ್ಟರ್ಸ್ ಯಾರನ್ನೂ ಕೇಳಿಲ್ಲ, ಹೌಸಿಂಗ್ ಬೋರ್ಡ್ ಕಮೀಷನರ್ ಹತ್ತಿರ ಮಾತನಾಡಲಿಲ್ಲ, ಹೌಸಿಂಗ್ ಸೆಕ್ರೆಟರಿಯವರ ಹತ್ತಿರ ಮಾತನಾಡಲಿಲ್ಲ, ನೇರವಾಗಿ ಸರ್ಕಾರ ಮತ್ತು ಹೌಸಿಂಗ್ ಬೋರ್ಡ್ ಛೇರ್ಮನ್ ಮಾಡಿದ್ದಾರೆಂದು ಹೇಳಿದರು. ಇದು ಯಾವುದೂ ಇಲ್ಲದ ಒಂದು ಆರೋಪವನ್ನು ಮಾಡಿದ್ದೀರಿ. ಅದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಆ ಫೈಲ್ ತರಿಸಿ ನೋಡಿ. ಯಾವುದಾದರೂ ಒಂದು ಇದರಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಿದೆಯೇ? ಸರ್ಕಾರ, ಯಾರಾದರೂ ಒಬ್ಬರು ಇಂತಹ ಕಂಟ್ರಾಕ್ಟರ್‌ಗೆ ಕೊಡಿ ಎಂದು ಹೇಳಿದೆಯೇ ಎಂದು ತಾವು ದಾಖಲೆ ನೋಡಬಹುದು. ಅವತ್ತು 15 ಸಾವಿರ ಫಿಕ್ಸ್ ಮಾಡಿದಮೇಲೆ ಹೌಸಿಂಗ್ ಬೋರ್ಡ್‌ನವರು, ಅಡ್ವರ್‌ಟೈಸ್‌ಮೆಂಟ್ ಹಾಕಿದರು. ಹೌಸಿಂಗ್ ಬೋರ್ಡಿನ ಕಮೀಷನರ್‌ರವರು ಛೇರ್ಮನ್‌ರಾಗಿ, ಚೀಫ್ ಎಂಜಿನಿಯರ್ ಮತ್ತು ಸಿ.ಎ.ಎಫ್.ಒ. ಅಕೌಂಟ್ಸ್‌ನವರು ಎಲ್ಲಾ ಸೇರಿಸಿ ಕಮಿಟಿ ಮಾಡಿ ಆ ಕಮಿಟಿ ಸರ್ಕಾರಕ್ಕೆ 15 ಹೆಸರುಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿತು. ಆ 15 ಹೆಸರುಗಳು ಬಂದ ಮೇಲೆ ಮಂತ್ರಿಮಂಡಲದಲ್ಲಿ ಇಟ್ಟು ಚರ್ಚೆಮಾಡಿ, ಅದರಲ್ಲಿ ಲ್ಯಾಂಡ್ ಆರ್ಮಿ ತೆಗೆದುಹಾಕಿದರು. ಏಕೆಂದರೆ ಬೆಳಗಾಂ ಜಿಲ್ಲೆಗೆ ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಇದ್ದು, ಆದರೆ ಅವತ್ತಿನ ಮಂತ್ರಿಮಂಡಲದ ಸದಸ್ಯರು ಒಬ್ಬರು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದವರು ನಮ್ಮ ಜಿಲ್ಲೆಗೆ ಬೇಡ, ಬೇರೆಯಾರಿಗಾದರೂ ಕೊಡಿ ಎಂದು ಹೇಳಿದ್ದರಿಂದ, ಅದೊಂದನ್ನು ಬಿಟ್ಟು ಬೇರೆಯವರಿಗೆ ಕೊಡಲಾಯಿತು. 14 ಜನರನ್ನು ಹೌಸಿಂಗ್ ಬೋರ್ಡ್ ಏನು ಅಪ್ರೂವ್ ಮಾಡಿತ್ತು, ಟೆಕ್ನಿಕಲ್ ಕಮಿಟಿ ಏನು ಅಪ್ರೂವ್ ಮಾಡಿತ್ತು, ಅದರ ಪ್ರಕಾರ ಕಳಿಸಿದ್ದೇವೆ. ಅಪ್ರೂವ್ ಮಾಡುವ ಸಂದರ್ಭದಲ್ಲಿ ಮೊಬಲೈಸೇಷನ್ ಅಡ್ವಾನ್ಸ್ ವಿಚಾರ ಬಂತು. ಇವತ್ತು ಪ್ರೀ-ಫ್ಯಾಬ್ರಿಕೇಟೆಡ್ ಮೆಟೀರಿಯಲ್ಸ್ ತಯಾರು ಮಾಡಬೇಕೆಂದರೆ ಯಾರ್ಡ್, ಮೆಷಿನರಿ ಎಲ್ಲಾ ಬೇಕಾಗುತ್ತದೆನ್ನುವ ವಿಚಾರ ಬಂದಾಗ ಕ್ಯಾಬಿನೆಟ್ ಒಂದು ಡಿಸಿಷನ್ ತೆಗೆದುಕೊಂಡಿತು.. ಮ್ಯಾಚಿಂಗ್ ಗ್ರ್ಯಾಂಟ್ 5 ಪರ್ಸೆಂಟ್ ಕೊಡಬೇಕೆಂದರೆ ಅದರಲ್ಲಿ ಬ್ಯಾಂಕ್ ಗ್ಯಾರಂಟಿ ಇವರಿಂದ ಕೊಡಬೇಕೆಂದು ಹೇಳಿ. ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ, ಬ್ಯಾಂಕ್ ಗ್ಯಾರಂಟಿ ಫೋರ್ಜರಿ ಕೊಟ್ಟರು ಎಂದು ಹೇಳಿ. ಬಹುಶಃ ಫೋರ್ಜರಿ ಬ್ಯಾಂಕ್ ಗ್ಯಾರಂಟಿ ಯಾರೇ ಕೊಡುವುದಾದರೆ, ಅವರ ಮೇಲೆ ಏನು ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೋ ಅದನ್ನು ನಿಜವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆ ಬಗ್ಗೆ ಮಂತ್ರಿಗಳು ಒಂದು ಕ್ರಮ ತೆಗೆದುಕೊಂಡಿದ್ದಾರೆ. ಇನ್ನೊಂದು ವಿಚಾರ. ಈಗ ನಾವು ಕ್ಯಾಬಿನೆಟ್‌ನಿಂದ ಮತ್ತು ಹೆಚ್‌ಯುಡಿಯಿಂದ ಆರ್ಡರ್ ಕೊಟ್ಟಮೇಲೆ ಅಗೆನೆಸ್ಟ್ ಬ್ಯಾಂಕ್ ಗ್ಯಾರಂಟಿ ಅಡ್ವಾನ್ಸ್ ಕೊಡಬೇಕೆಂದ ಮೇಲೆ ಯಾರೇ ಅದರ ವಿರುದ್ಧ ನಡೆದಿದ್ದರೂ, ತಪ್ಪು ಮಾಡಿದ್ದರೂ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳಿದರು. ಏನೋ 5 ಕೋಟಿ ರೂಪಾಯಿ ಬಗ್ಗೆ ಅವರು ಹೇಳಿದರು, ಅದರ ಬಗ್ಗೆ ಮಂತ್ರಿಗಳು ಹೇಳುತ್ತಾರೆ. ಈ 5 ಕೋಟಿ ವಿಚಾರ ನಾನು ಪತ್ರಿಕೆಯಲ್ಲಿ ನೋಡಿದೆ. ಅದರ ಬಗ್ಗೆ ಸಿಒಡಿ ಎನ್‌ಕ್ವಯರಿಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದಾರೆಂದು ತಿಳಿಯಿತು. ಕ್ಯಾಬಿನೆಟ್ ಡಿಸಿಷನ್ ವಿರುದ್ಧ ಯಾರಾದರೂ ನಡೆದಿದ್ದರೆ ಕ್ರಮ ಅನಿವಾರ್ಯ. ಆದರೆ ಒಂದು, ಇವತ್ತು ಇಲ್ಲಿ ಅಧಿಕಾರಿಗಳು ಇರುತ್ತಾರೆ. 5 ಕೋಟಿ ರೂಪಾಯಿ ಒಂದೇ ದಿವಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಮಾಡಿದ್ದರೆ ನಾನು

ಮಂತ್ರಿಮಂಡಲವನ್ನು ಕೇಳುತ್ತೇನೆ. ಆ ಅಧಿಕಾರಿಗಳ ಬಗ್ಗೆ ಸಿಒಡಿ ಎನ್‌ಕ್ವಯರಿ ಅಷ್ಟೇ ಅಲ್ಲ, ಪ್ರೈಮಾಫೇಸಿ ಯಾರೇ ತಪ್ಪು ಮಾಡಿರುವುದು ಕಂಡುಬಂದರೆ ಅಂತಹ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿ ಇಡಬೇಕು. ಏಕೆಂದರೆ, ಇಂತಹ ಆಶ್ರಯ ಯೋಜನೆಯಲ್ಲಿ, ಬಡವರ ಕಾರ್ಯಕ್ರಮದಲ್ಲಿ ಯಾರೇ ತಪ್ಪು ಮಾಡಿದರೂ ನಾವು ಒಂದು ನಿಮಿಷವೂ ಕ್ಷಮಿಸಬಾರದು ಎಂದು ಹೇಳುತ್ತೇನೆ. ಮಾನ್ಯ ದೇಶಪಾಂಡೆಯವರು ಹೌಸಿಂಗ್ ಬೋರ್ಡ್‌ನ 3-4 ಕಾರ್ಯಕ್ರಮಗಳ ಬಗ್ಗೆ ಹೇಳಿದರು. ದೇಶಪಾಂಡೆಯವರಿಗೆ ಒಂದು ಹೇಳುತ್ತಿದ್ದೇನೆ. ಹಿಂದೆ ಯಾರೂ ಯಲಹಂಕದಲ್ಲಿ ಮನೆ ತೆಗೆದುಕೊಳ್ಳದಿರುವುದಕ್ಕೆ ಕಾರಣ ಏನೆಂದರೆ, ಹಿಂದಿನ ಸರ್ಕಾರದ ಕಾಲದಲ್ಲಿ ಈ ಹಿಂದೆ ಮನೆ ಕಟ್ಟಿಕೊಡಲಾಗಿತ್ತು ಆ ಮನೆಗಳನ್ನು ಮಣ್ಣಿನಲ್ಲಿ ಕಟ್ಟಿದ್ದು ಎಲ್ಲಾ ಬಿದ್ದುಹೋಗಿವೆ. ಇದರಿಂದ ಇವತ್ತು ಯಾರೂ ಅಲ್ಲಿಗೆ ಹೋಗಿರುವುದಿಲ್ಲ. ಯಲಹಂಕಕ್ಕೆ ಯಾರೂ ಬರುವುದಿಲ್ಲ. ತಾವು ಹೇಳಿದಹಾಗೆ ಕೆಂಗೇರಿಯಲ್ಲಾಗಲೀ ಅಥವಾ ಮೈಸೂರಿನಲ್ಲಾಗಲೀ ಅಥವಾ ಯಲಹಂಕದಲ್ಲಿ ಹೊಸದಾಗಿ ಕಟ್ಟಿರುವುದಾಗಲೀ ಹೌಸಿಂಗ್ ಬೋರ್ಡ್, ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ಅದಕ್ಕೆ ಪ್ರಪೋಜಲ್ ಬಂದು, ಕ್ಯಾಬಿನೆಟ್‌ಗೆ ಬಂದು, ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಗಿ, ಸೆಲ್ಫ್ ಫೈನಾನ್ಸ್ ಸ್ಕೀಮ್‌ಗೆ ಆ ಸಂದರ್ಭದಲ್ಲಿ ಸರ್ಕಾರದಿಂದಲೂ ಕೂಡ ಕೊಟ್ಟಿದ್ದೇವೆ. ಮಂತ್ರಿಗಳೂ ಕೂಡ ಹೇಳಬಹುದು. ಏಕೆಂದರೆ ಯಾರೇ ತಪ್ಪು ಮಾಡಿರಲಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕೇ ಹೊರತು ಇಡೀ ಆಶ್ರಯ ಸ್ಕೀಮ್ ಮೇಲೆ ದೂರು ಹೇಳುವುದು ಸರಿಯಲ್ಲ. ಅದು ತಡವಾಗಲಿಕ್ಕೆ ಹಲವಾರು ಕಾರಣಗಳಿವೆ. ತಡವಾಗಿರುವುದಕ್ಕೆ ಕಾರಣ ಪ್ರೀ ಫ್ಯಾಬ್ರಿಕೇಟ್ ಹೊಸ ಟೆಕ್ನಾಲಜಿ. ಅದನ್ನು ಎಲ್ಲಾ ಕಡೆಗೂ ಪ್ರಚಾರ ಮಾಡಬೇಕಾಗಿತ್ತು ಬಹುಶಃ ಹೊಸದಾಗಿ ಯಾವುದಾದರೂ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದಾಗ ಹಲವಾರು ಸ್ಟಾರ್ಟಿಂಗ್ ಪ್ರಾಬ್ಲಮ್ಸ್‌ಗಳನ್ನು ಎದುರಿಸಬೇಕಾಗುತ್ತದೆ. ನಾನೂ ಸಹ ಎರಡು ಸಂದರ್ಭಗಳಲ್ಲಿ ಸಭೆಯನ್ನು ಕರೆದಿದ್ದೇನೆ. ಏನಾಗಿದೆಯೆಂದರೆ ಜಿಲ್ಲಾವಾರು ಜಾಸ್ತಿ ಕೊಟ್ಟಿದ್ದೇವೆ. ಪ್ರಾಕ್ಟಿಕಲ್ ಪ್ರಾಬ್ಲಮ್ಸ್ ಏನಿತ್ತು ಅಂದರೆ ಒಂದು ಮನೆಗೆ 15 ಸಾವಿರ ಫಿಕ್ಸ್ ಮಾಡಿದಾಗ ಸಿಮೆಂಟ್ ಮತ್ತು ಸ್ಟೀಲ್ ರೇಟ್ ಜಾಸ್ತಿಯಾದ್ದರಿಂದ 15 ಸಾವಿರ ರೂಪಾಯಿಗಳಿಗೆ ಮನೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಐದಾರು ಜನ ಕಂಟ್ರಾಕ್ಟರುಗಳು ಮುಂದೆ ಬರಲಿಲ್ಲ. ಮತ್ತೆ ಅವರ ಜೊತೆಯಲ್ಲಿ ಮಾತನಾಡಿದಾಗ 18 ಸಾವಿರ ರೂಪಾಯಿ ಮಾಡಿದರೆ ನಾವು ಮನೆ ಕಟ್ಟುತ್ತೇವೆಂದು ಹೇಳಿದರು. ಮೊನ್ನೆ ನಾನೂ ಸಹ ಮಂತ್ರಿಗಳು ಹೇಳಿರುವುದನ್ನು ನೋಡಿದ್ದೇನೆ. ಅವರೂ ಸಹ 15 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮನೆ ಕಟ್ಟುವುದಕ್ಕೆ ಆಗುವುದಿಲ್ಲ ಅದನ್ನು 20 ಸಾವಿರ ರೂಪಾಯಿ ಮಾಡಿದರೆ ಆಗುತ್ತದೆಂದು ಹೇಳಿದ್ದಾರೆ. ಈವೊಂದು ಟೆಕ್ನಿಕಲ್ ಮ್ಯಾನ್ಯುಯಲ್ ಅನ್ನು ಪ್ರತಿಯೊಂದು ಆಶ್ರಯ ಸ್ಕೀಮ್‌ನಲ್ಲಿ ಛೇರ್ಮನ್‌ಗಳಿಗೆ ಕಳುಹಿಸಿ ಕೊಟ್ಟಿದ್ದೇವೆ. ಯಾವ ರೀತಿ ಮನೆ ಕಟ್ಟಬೇಕೆಂದು ಕಳುಹಿಸಿ ಕೊಟ್ಟಿದ್ದೇವೆ. ಈಗ ಕೊಡತಕ್ಕ ಹಣದಲ್ಲಿ ಮನೆ ಕಟ್ಟಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದನ್ನು ಹೆಚ್ಚಿಗೆ ಮಾಡಿ. ಜಿಲ್ಲಾಧಿಕಾರಿಗಳು ಅಥವಾ ಬೇರೆಯವರ ಕಡೆಯಿಂದ ಮಾಡಿಸಿ. ಮ್ಯಾನ್ಯುಯಲ್ ಪ್ರಕಾರ ಮಾಡಿದರೆ ಬಹುಶಃ ಒಳ್ಳೆಯ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ನಾನು ಮಂತ್ರಿಯಾಗಿದ್ದಾಗ ಆರೋಪಗಳು ಬಂತು. ಜಾಗ ಖರೀದಿ ಮಾಡುವಾಗ ಕೊಡಗಿನಲ್ಲಿ ಒಂದು ದೂರು ಬಂತು. ಅದನ್ನು ಮಾನ್ಯ ಎಂ.ಸಿ. ನಾಣಯ್ಯನವರು ಹೇಳಿದರು. ಕೂಡಲೇ ಅದರ ಬಗ್ಗೆ ಎನ್‌ಕ್ವಾಯರಿ ಮಾಡಿಸಿ ಅಲ್ಲಿರುವ ಬಿಡಿಒ ತಪ್ಪು ಮಾಡಿದ್ದಾರೆಂದು ಕಂಡುಬಂತು, ತಕ್ಷಣ ಬಿಡಿಒ ಅವರನ್ನು ಸಸ್ಪೆಂಡ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಪ್ರತಿಯೊಂದು ಕಂಪ್ಲೈಂಟ್ ಬಂದಾಗ ಅದರ ವಿಚಾರದಲ್ಲಿ ಎನ್‌ಕ್ವಾಯರಿ ಮಾಡುವಂತಹ ಕೆಲಸ ಮಾಡಿ ಯಾರೇ ತಪ್ಪು ಮಾಡಿದ್ದರೂ ಸಹ ಯಾರು ಕಾನೂನು ಬಿಟ್ಟು ಕೆಲಸ ಮಾಡುತ್ತಾರೆ ಅವರಿಗೆ ಶಿಕ್ಷೆ ಕೊಡಬೇಕೇ ಹೊರತು ಇಡೀ ಸ್ಕೀಮನ್ನೇ ಇಡೀ ಸರ್ಕಾರವನ್ನೇ ಟೀಕೆ ಮಾಡುವುದು ಸರಿಯುಲ್ಲವೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ ಜೈಹಿಂದ್.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಅಧ್ಯಕ್ಷರೆ, ಮನೆ ಕಟ್ಟುವ ವಿಚಾರದಲ್ಲಿ ನಾನು ಕೇಳಿದ್ದೇನೆ. ಮನೆ ಕಟ್ಟುವ ಕಂಟ್ರಾಕ್ಟರನ್ನು ಮನೆ ಕಟ್ಟಿ ಯಾವಾಗ ಮುಗಿಸುತ್ತೀಯಪ್ಪಾ, ಇನ್ನು ಏಕೆ ಶುರು ಮಾಡಿಲ್ಲವೆಂದು ಕೇಳಿದೆ. ನಾನು ಭಾಷಣ ಮಾಡುವುದಿಲ್ಲ ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:- ನೀವು ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

† ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಭಾಷಣ ಮಾಡುವುದಿಲ್ಲ. ಒಂದು ಕ್ಲಾರಿಫಿಕೇಷನ್. ಎರಡು ನಿಮಿಷಗಳ ಮೇಲೆ ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಮನೆ ಕಟ್ಟುವ ಕಂಟ್ರಾಕ್ಟರ್ ಹೇಳಿದ ಖರ್ಚಿಗೆ ಎರಡು ಸಾವಿರ. 15 ಸಾವಿರದಲ್ಲಿ ಎರಡು ಸಾವಿರ ಹೋದರೆ ಉಳಿದ 13 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳಿದ. ಆಮೇಲೆ ಯಾವ ರೀತಿ ಮನೆ ಕಟ್ಟುತ್ತೀರಿ ಹೇಳು ಅಂದೆ. ಅವನು ಹೇಳಿದ ಒಂದು ಒಂದೂವರೆ ಅಥವಾ ಎರಡು ಅಡಿ ಪಾಯ ತೆಗೆಯುತ್ತೇವೆ ಅಂದ. ಒಂದೂವರೆ ಅಡಿ ಪಾಯ ತೆಗೆದರೆ ಏನೋ ಮಾರಾಯ ಒಂದೂವರೆ ಅಡಿ ಪಾಯ ತೆಗೆದರು ಮರಳು ಸಿಕ್ಕಿದರೆ ನೀರುಗೀರು ಏನು ಮಾಡುವುದು ಅಂದೆ. ನೀರು ಬಂದರೂ ಅದರ ಮೇಲೆ ಕಟ್ಟುತ್ತೇವೆ, ಮರಳು ಸಿಕ್ಕಿದರೂ ಅದರ ಮೇಲೆ ಕಟ್ಟುತ್ತೇವೆ ಅಂದ. ಆಮೇಲೆ ಮನೆ ಬಿದ್ದರೆ ಏನಪ್ಪ ಗತಿ ಹೀಗೆ ಹೇಳುತ್ತಾ ಇದ್ದೀಯಾ ಅಂದೆ. ಮನೆ ಬಿದ್ದರೆ ಅಂದರೆ, ಮನೆ ಬಿದ್ದು ಜನಗಳು ಸತ್ತರೆ ನಮ್ಮದೆ ತಪ್ಪು ಎಂದು ಹೇಳಿದ. ಮನೆ ಬೀಳದ ಹಾಗೆ ಜನರು ಸಾಯದಹಾಗೆ ಇರಬೇಕಾದರೆ ಜಾಸ್ತಿ ಹಣವನ್ನು ಕೊಡಬೇಕು ಅಂದ, ನಾನು ಮಾತನಾಡಲಿಲ್ಲ. ನಾನು ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಯಾರೋ ಬಡವರಿಗೆ ಮನೆ ಕಟ್ಟುತ್ತೇವೆಂದು ಹೇಳಿಬಿಟ್ಟು ಮನಸ್ಸಿಗೆ ಬಂದಹಾಗೆ ವ್ಯವಹಾರ ಮಾಡಿಬಿಟ್ಟು ಅವರನ್ನು ಹೋಗಿ ಮನೆ ಕಟ್ಟಿ ಅಂದರೆ, ಅವನನ್ನು ಕೇಳಿದರೆ ನಾವು ಜಾಸ್ತಿ ಪಾಯ ತೆಗೆಯುವುದಿಲ್ಲವೆಂದು ಹೇಳುತ್ತಾನೆ. ಪಾಯ ನಾಲ್ಕೈದು ಅಡಿ ಹೋಗಲಿ ಅಂದರೆ ನಾವು ಎಂತಹದೇ ಜಾಗವಿರಲಿ ಒಂದೂವರೆ ಅಡಿ ಮೇಲೆ ಪಾಯ ತೆಗೆಯುವುದಿಲ್ಲವೆಂದು ಹೇಳುತ್ತಾನೆ. ಒಂದೂವರೆ ಅಡಿ ಪಾಯ ತೆಗೆದು ಮನೆ ಕಟ್ಟುತ್ತೇವೆಂದರೆ ಅದು ಸಾಧ್ಯವಿಲ್ಲ. ಇಂತಹ ಮನೆ ಕಟ್ಟಲಿಕ್ಕೆ ನೀವು ಅಷ್ಟೊಂದು ಮಾತನಾಡಿದಿರಾ? ಅಂತಹ ಮನೆಗಳನ್ನು ಕಟ್ಟಿದರೇನು ಕಟ್ಟದಿದ್ದರೇನು? ನ್ಯಾಯವಾಗಿ ಪಾಪ ಬಡಪಾಯಿ ಏನೂ ಇಲ್ಲವೆಂದು ಹೇಳಿ ಅನುಕಂಪ ತೋರಿಸಿ ನೀವು ಕಟ್ಟುವಂತಹ ಮನೆ ಹತ್ತಾರುವರ್ಷಗಳ ಕಾಲ ಇರಬೇಕೋ ಬೇಡವೋ ಹಳ್ಳಿ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿ 100-200 ವರ್ಷಗಳಾಗಿವೆ. ಅದು ಮಣ್ಣಿನಗೋಡೆ ಎಷ್ಟು ಭದ್ರವಾಗಿವೆ. ತಾವು ಯಾವುದೋ ಟೆಕ್ನಾಲಜಿ ಎಂದು ಹೇಳಿ ಅದು ಎಂತಹದೋ ತೋರಿಸಿ, ಏನೇನೋ ಹೇಳಿಕೊಂಡು ಹೀಗೆ ಮಾಡಿದರೆ ದೇಶ ಉಳಿಯುತ್ತದೆಯೆ? ಬಡವರ ಗತಿಯೇನು? ಕಟ್ಟುವುದಾದರೆ ಸರಿಯಾಗಿ ಪಾಯ ತೆಗೆದು ಒಳ್ಳೆಯ ಮನೆಗಳನ್ನು ಹತ್ತಾರು ವರ್ಷಗಳು ಇರುವ ಹಾಗೆ ಮನೆ ಕಟ್ಟಲಿ. ಅಂತಹ ಮನೆಗಳನ್ನು ಬಡವರಿಗೆ ಕಟ್ಟಿಸಿ ನರಕಕ್ಕೆ ಏತಕ್ಕೆ ಹೋಗುತ್ತೀರಿ? ಏಕೆ ಬಡಪಾಯಿಗಳನ್ನು ಸಾಯಿಸುತ್ತೀರಿ?

ಶ್ರೀ ಬಿ.ಹೆಚ್. ಬನ್ನಿಕೋಡ್:- 15,000ದಲ್ಲಿ ಈಗಾಗಲೇ 2000 ಮೊದಲೇ ತೆಗೆದುಕೊಂಡಿದ್ದರೆ, ಮನೆಗಳನ್ನು ಹೇಗೆ ಕಟ್ಟಬೇಕು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ವಾಸ್ತವವಾದ ಸ್ಥಿತಿ, ಜಿಲ್ಲಾ ಮಟ್ಟದಲ್ಲಿ ತಮ್ಮ ಕಂಟ್ರಾಕ್ಟರುಗಳು ಯಾರು ಇಲ್ಲ. ತಾಲ್ಲೂಕು, ಹಳ್ಳಿಗಳ ಮಟ್ಟದಲ್ಲಿ ಬೇರೆ ಕಂಟ್ರಾಕ್ಟ ಕೊಟ್ಟಿದ್ದಾರೆ. ನಾನು ಸ್ಥಳದಲ್ಲಿ ನಿಂತು ಕೇಳಿದ್ದೇನೆ. ನಿಮ್ಮ ಸ್ಪೆಸಿಫಿಕೇಷನ್‌ನಲ್ಲಿ ಎರಡು ಅಡಿ ಪಾಯ ತೆಗೆಯಿರಿ ಎಂದು ಹೇಳಿದ್ದೀರಿ. ಎರಡು ಅಡಿ ಎಲ್ಲೂ ಪಾಯ ಮಾಡಿಲ್ಲ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ನಿಮ್ಮ ಮನೆಗಳನ್ನು ನಿಲ್ಲಿಸಿದ್ದೇವೆ. ನಮಗೆ ಡಿ.ಸಿ.ಯವರು ಬರೆದಿದ್ದಾರೆ, ನೀವು ಮನೆ ಕಟ್ಟಲಿಕ್ಕೆ

ಅಡ್ಡಿ ಮಾಡುತ್ತಿದ್ದೀರ ಅಂತ. ಅಷ್ಟೂ ಜನ ಫಲಾನುಭವಿಗಳು ಬೇಡುತ್ತಿದ್ದಾರೆ, ಅವರ ಕೈಯಲ್ಲಿ ಮನೆ ಕಟ್ಟಿಸಬೇಡಿ ನಾವು ಹಾಳಾಗಿ ಹೋಗುತ್ತಿದ್ದೇವೆ. 12 × 15 ಅಡಿ ಅಗಲದ ಮನೆಯಲ್ಲಿ ನಮಗೆ ವಾಸ ಮಾಡುವುದಕ್ಕೆ ಆಗುವುದಿಲ್ಲ. ಎಷ್ಟು ಹಣ ಖರ್ಚು ಮಾಡುತ್ತೀರಿ, ಅಷ್ಟನ್ನು ನಮಗೆ ಕೊಡಿ, ನಾವು ಕಟ್ಟಿಸಿಕೊಳ್ಳುತ್ತೀವಿ ಎಂದು ಅವರು ಹೇಳುತ್ತಾರೆ. ಇದೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇದರಿಂದ ಜನರಿಗೆ ಒಳ್ಳೆಯದಾಗಿಯೇ ಆಶ್ರಯದಿಂದ ಭಾರಿ ಸಹಾಯ ಮಾಡಿದ್ದೇವೆ ಎಂದು ತಿಳಿದುಕೊಂಡಿದ್ದರೆ ಅದು ಒಂದು ಮಿಥ್ಯ. ಇದನ್ನು ಒಳ್ಳೆಯ ಕಾರ್ಯಕ್ರಮ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ರೂಮು ಸೇರಿಸಬೇಕು ಎಂದರೆ ಪ್ರಾವಿಷನ್ ಇಲ್ಲ. 12 ಸಾವಿರ ಮಾತ್ರ ಲೋಕಲ್ ಕಂಟ್ರಾಕ್ಟರ್‌ಗೆ ಕೊಡುತ್ತಾ ಇರುವುದು, ಅದರಲ್ಲಿ ನಾವು ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಯಾರೋ ನಿಮಗೆ ಆಂಧ್ರಪ್ರದೇಶದವರು, ಮಹಾರಾಷ್ಟ್ರದವರು ಟೆಕ್ನಿಕಲೀ ಕ್ವಾಲಿಫೈಡ್‌ನವರನ್ನು ತಂದು ಮನೆ ಕಟ್ಟಿದ್ದಾರೆ ಎನ್ನುವುದು ಸುಳ್ಳು. ಎಲ್ಲಾ ನಿಮ್ಮ ಪಾರ್ಟಿಗೆ ಸೇರಿದವರಿಗೇ ಕಾಂಟ್ರಾಕ್ಟ್ ಕೊಟ್ಟಿದ್ದೀರಿ. ಬನ್ನಿ, ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ನಿಮಗೆ ತೋರಿಸುತ್ತೇನೆ. ನಿಮ್ಮ ಯೂತ್ ಕಾಂಗ್ರೆಸ್ ಅಧ್ಯಕ್ಷರು ನಮ್ಮ ತಾಲ್ಲೂಕಿಗೆ ಕಂಟ್ರಾಕ್ಟರ್ ಆಗಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮೊದಲು ಜನತಾ ಮನೆಗಳು ಎಂದು ಕಟ್ಟುತ್ತಾ ಇದ್ದರು, ರೂ 8500 ಅದಕ್ಕೆ ಕೊಡುತ್ತಾ ಇದ್ದರು. ಹಂತಹಂತವಾಗಿ ಪ್ಲಿಂತ್, ಅಥವಾ ಗೋಡೆ, ರೂಫ್‌ವರೆಗೆ ಅಂತ ಹಣ ಕೊಡುತ್ತಿದ್ದರು. ಅವರು ಚೆನ್ನಾಗಿ ಕಾಳಜಿಯಿಂದ ಉತ್ತಮವಾಗಿ ಕಟ್ಟಿಕೊಳ್ಳುತ್ತಿದ್ದರು. ಇವತ್ತು 15 ಸಾವಿರ ರೂಪಾಯಿಗೆ ಮನೆ ಕಟ್ಟುತ್ತೇವೆ, ಇನ್ನೊಂದು ಕೋಣೆ ಹೆಚ್ಚಿಗೆ ಕೊಡುತ್ತೇವೆ ಎಂದು ಸದನಕ್ಕೆ ಹೇಳಿ, ಜನತೆಗೆ ಹೇಳಿ, ಈಗ ಶ್ರೀ ಹನುಮೇಗೌಡರು ಹೇಳಿದಂತೆ ಮೊದಲೇ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟರೆ ಯಾವ ರೀತಿ ಮನೆ ಕಟ್ಟಿಕೊಡುತ್ತಾನೆ. ಜನರಿಗೆ ಈಗಾಗಲೇ ಕೊಟ್ಟಂಥ ಮನೆಗಳು ಏನಿವೆ, 1987 ರಿಂದ 89ರತನಕ, ಸುಮಾರು ನನ್ನ ತಾಲ್ಲೂಕಿನಲ್ಲಿ ಇನ್ನೂ 16 ಲಕ್ಷ ಬಾಕಿ ಕೊಡಬೇಕು. ಅವು ಅಪೂರ್ಣವಾಗಿದೆ, ಪ್ಲಿಂತ್‌ವರೆಗೆ ಬಂದಿವೆ, ರೂಫ್ ಹಾಕಿಲ್ಲ, ಅರ್ಧಂಬರ್ಧ ಗೋಡೆಯಾಗಿದೆ. 87 ರಿಂದ 89ರತನಕ ಇಲ್ಲಿಯವರೆಗೂ ಅವರಿಗೆ ಹಣ ಪೂರ್ತಿ ಸಿಕ್ಕಿಲ್ಲ. ಐದುನೂರು, ಸಾವಿರ ಅಂತ ಹೀಗೆ ಕೊಟ್ಟಿದ್ದಾರೆ. ಈ ರೀತಿ ನನ್ನ ತಾಲ್ಲೂಕಿನಲ್ಲಿ 16 ಲಕ್ಷ ಬಾಕಿ ಕೊಡಬೇಕು. ಧಾರವಾಡ ಜಿಲ್ಲೆಯಲ್ಲಿ ಸುಮಾರು 2 ಕೋಟಿ 48 ಲಕ್ಷ ಬಾಕಿ ಕೊಡಬೇಕಾಗಿದೆ. ಇಡೀ ರಾಜ್ಯದಲ್ಲಿ 42 ಕೋಟಿ ಬಾಕಿ ಕೊಡಬೇಕಾಗಿದೆ. ಈ ಮನೆಗಳು 87 ರಿಂದ 91ರಲ್ಲಿಯೇ ಪೂರ್ಣ ಆಗಬೇಕಿತ್ತು. ಅವರಿಗೆ ಹಣ ಕೊಟ್ಟಿಲ್ಲ. ಮತ್ತೆ ತಾಲ್ಲೂಕಿಗೆ ಐದುನೂರು, ಸಾವಿರ ಮನೆ ಕೊಡುತ್ತೇವೆ ಎಂದರೆ ಇದರ ಅರ್ಥ ಏನು? ಇದು ಕೇವಲ ಬಡವರ ಹೆಸರಿನಲ್ಲಿ, ಬಡವರಿಗೆ ಆಶ್ರಯ ಕೊಡುತ್ತೇವೆ ಎಂದು, ಹೇಳಿ ತಮ್ಮವರಿಗೆ ಆಶ್ರಯ ಕೊಡುತ್ತಾರೆಯೇ ವಿನಹ ಬಡವರಿಗೆ ಆಶ್ರಯ ಕೊಡುತ್ತಿಲ್ಲ. ಈ ಹಣ, 15 ಸಾವಿರ ರೂಪಾಯಿಗಳನ್ನು ಅವರಿಗೇ ಕೊಟ್ಟರೆ ಉತ್ತಮವಾದಂಥ ಮನೆಗಳನ್ನು ಕಟ್ಟಿಕೊಂಡು ಇರುತ್ತಾರೆ. ಈ ಬಗ್ಗೆ ಸರಕಾರ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ:- ನಮ್ಮ ಬೆಳಗಾವಿ ಜಿಲ್ಲೆಯಲ್ಲಿ, ನನ್ನ ಮತದಾರ ಕ್ಷೇತ್ರದಲ್ಲಿ 30 ಮನೆಗಳನ್ನು ಕಟ್ಟುವುದಕ್ಕೆ ಶುರುಮಾಡಿದರು. ಶುರು ಮಾಡಿ ಅಲ್ಲಿ ಒಬ್ಬ ಸಬ್ ಕಂಟ್ರಾಕ್ಟರ್‌ಗೆ ಕೊಟ್ಟರು. ಅವನು ಬಿಲ್ ಸಹಿತ ಕೊಟ್ಟಿಲ್ಲ. ಅಂದರೆ ಇವತ್ತಿನ ದಿವಸ ಹೌಸಿಂಗ್ ಬೋರ್ಡ್‌ಗೂ ಡೂಪ್ ಮಾಡಿದರು, ಅದರ ಜೊತೆಗೆ ಪಾಪ, ಬಡವನಾದ ಕಂಟ್ರಾಕ್ಟರ್‌ಗೆ ಸಹಿತ ಡೂಪ್ ಮಾಡಿ ಇಲ್ಲಿ ಇವರು ಬಂದರು.

ಅಧ್ಯಕ್ಷರು:- ಅಂದರೆ ಡಬಲ್ ಡೂಪ್ ಆಯಿತು ಅಂತೀರಾ?

ಡಾ।। ಜೀವರಾಜ್ ಆಳ್ವ:- ಶ್ರೀ ಹನುಮೇಗೌಡರು ಮಾತನಾಡಿದರು, ಜೊತೆಗೆ ಹಿಂದಿನ

ಮಂತ್ರಿಗಳಾದ ಶ್ರೀ ಜಾರ್ಜ್‌ನವರು ಮಾತನಾಡಿದರು. ಅವರ ಮಾತಿನ ಧಾಟಿಯಲ್ಲಿ ಒಂದು ಅರ್ಥವಾಯಿತು....

Mr.SPEAKER:- Do you want to speak?

Dr. Jeevaraj Alva:- Yes.

Mr. Speaker:- I will let you make a speech. ಯಾರಾದರೂ ಮಾತನಾಡುವವರಿದ್ದರೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಒಂದೇ ಒಂದು ಕ್ಲಾರಿಫಿಕೇಶನ್.

ಅಧ್ಯಕ್ಷರು:- ನನ್ನನ್ನು ಕ್ಲಾರಿಫಿಕೇಶನ್ ಕೇಳುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ:- ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳು ಎಂದು ಹೇಳಿದರು. ಯಾವುದಾದರೂ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳು ಸೇರಿ, ಯಾವುದೇ ಮಂತ್ರಿಗಳು ಸೇರಿ, ಒಂದೇ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದು ಸಾವಿರ ಬೇಡ, ಒಂದು ನೂರು ಮನೆಗಳನ್ನು ಮಾಡಿದ್ದೇವೆ ಎಂದು ಹೇಳಿದರೆ ನಿಜಕ್ಕೂ ಸಂತೋಷವಾಗುತ್ತದೆ. ಆ ಯೋಜನೆ ಕೂಡ ಸರಿಯಾಗುತ್ತದೆ ಎಂದು ಹೇಳುತ್ತೇನೆ. ಕೇವಲ ಒಂದು ಸ್ಟಂಟ್, ನಾಟಕ ಮಾಡಿಬಿಟ್ಟರು. ಯಾರ್ಯಾರಿಗೆ ದುಡ್ಡು ಮಾಡಿಕೊಳ್ಳಬೇಕೆಂದು ಅಪೇಕ್ಷೆ ಇತ್ತು, ಅವರಿಗೆಲ್ಲ ದುಡ್ಡು ಮಾಡಿಕೊಳ್ಳುವುದಕ್ಕೆ ಒಂದು ಸ್ಕೀಮ್ ಆಯಿತು ಇದು. ಈ ಆಶ್ರಯ ಯೋಜನೆಯಲ್ಲಿ ಬೇರೆ ಏನೂ ಇಲ್ಲ.

Mr.SPEAKER:- Mr.R.V. Deshpande, you have sent a document to me. According to the conventions and parliamentary practices, a member can also lay a document or paper on the table, but only with the previous permission of the Speaker. A member is therefore required to supply a copy to the Speaker in advance so as to enable him to decide whether permission should be granted or not. So, I am sending it back to you.

ಶ್ರೀ ಬಿ.ಹೆಚ್. ಬನ್ನಿಕೋಡ್:- ಕೊಡುವಾಗ ತಾವು ಸುಮ್ಮನೇ ಇದ್ದಿರಿ. ಅದಕ್ಕೋಸ್ಕರ ಪರ್ಮಿಷನ್ ಕೊಟ್ಟರು ಎಂದು ಭಾವನೆ ಮಾಡಿದೆವು.

Sri R.V. DESHAPANDE:- It was my pleasure to give you a copy.

Mr.SPEAKER:- It is your pleasure. I only quoted the rule.

ಡಾ।। ಜೀವರಾಜ್ ಆಳ್ವ:- ಕಾಪಿ ನಮಗೂ ಸಿಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಅಥೆಂಟಿಕೇಟೆಡ್ ಕಾಪಿ ನಮಗೂ ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಜೀವರಾಜ ಆಳ್ವರವರು ಭಾಷಣ ಮಾಡುವ ಮೊದಲು ತಮ್ಮಲ್ಲಿ ಒಂದು ಮನವಿ. ಈಗಾಗಲೇ 6 ಗಂಟೆಯಾಗುತ್ತಾ ಇದೆ. ಇನ್ನು, ಇವತ್ತಿನ ಕಾರ್ಯಕ್ರಮದ ಪ್ರಕಾರ ಸುಮಾರು 2 ದಿವಸದ ಕಾರ್ಯಕ್ರಮ ಇಲ್ಲಿದೆ. ಮತ್ತು ಖಾಸಗಿ ಕಾರ್ಯಕ್ರಮಗಳ ವಿಷಯ ಮುಂದೇ ಹೋಗುತ್ತದೆ. ಹೋದ ಶುಕ್ರವಾರ ಆಗಲಿಲ್ಲ, ಹಿಂದಿನ ಶುಕ್ರವಾರ ಆಗಲಿಲ್ಲ. ಹೀಗೆಯೇ ಮುಂದೆ ಹೋಗುತ್ತಿದೆ. ಅದಕ್ಕೊಂದು ಬೆಲೆ ಬರುವುದಿಲ್ಲ. ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಕನಿಷ್ಟ ಒಂದು ದಿನವಾದರೂ ನಮಗೆ ಬೇಕಾಗುತ್ತದೆ.

ದಯಮಾಡಿ, ಶುಕ್ರವಾರ ನಡೆಸುವುದಕ್ಕೆ ಒಂದು ಅವಕಾಶ ಕೊಡಿ. ಇಲ್ಲದಿದ್ದರೆ, ಇವತ್ತು ರಾತ್ರಿ ಎರಡು ಗಂಟೆಯವರೆಗೆ ಕುಳಿತರೂ ಇದು ಮುಗಿಯುವ ಮಟ್ಟದಲ್ಲಿ ಇಲ್ಲ. ಇವತ್ತು ನಾವು ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ. ಇನ್ನೂ ಸಾಕಷ್ಟು ವಿಚಾರಗಳು ಇವೆ.

ಅಧ್ಯಕ್ಷರು:- ಒಂಭತ್ತು ವರೆಗೆ ಇತ್ತು, ನೀವು ಒಂಭತ್ತು ಗಂಟೆಗೆ ಏಕೆ ಬಂದಿರಿ?

ಶ್ರೀ ವಾಟಾಳ್ ನಾಗರಾಜ್:- ನಾವು ಮನೆ ಬಿಟ್ಟಿದ್ದುದು 9 ಗಂಟೆಗೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಸಭಾಧ್ಯಕ್ಷರೇ, ಇನ್ನೂ 1-2 ದಿವಸ ಮುಂದುವರಿಸಿದರೆ ಒಳ್ಳೆಯದು. ಏಕೆಂದರೆ, ಇವತ್ತು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಕುಳಿತಿದ್ದೇವೆ. ಇನ್ನೂ ಸಾಕಷ್ಟು ಚರ್ಚೆ ಮಾಡುವುದಿದೆ. ದಯವಿಟ್ಟು ಮುಂದುವರಿಸಿದರೆ ಒಳ್ಳೆಯದು.

ಶ್ರೀ ಆರ್.ವಿ. ದೇಶಪಾಂಡೆ:- ಅಧ್ಯಕ್ಷರೇ, ಸದನವನ್ನು ಎರಡಲ್ಲ, ಮೂರು ದಿನ ನಡೆಸುವುದಕ್ಕೆ ನನ್ನ ವಿರೋಧ ಇಲ್ಲ. ಆದರೆ, ಪ್ರಶ್ನೆ ಏನಿದೆ ಎಂದರೆ, ನಾಳೆ ಹಬ್ಬ ಇದೆ. ಎಲ್ಲಾ ಶಾಸಕರೂ ತಮ್ಮ ಸ್ವಂತ ಊರುಗಳಿಗೆ ಹೋಗುತ್ತಾರೆ. ಶುಕ್ರವಾರ ವಾಪಸ್ ಬರುವುದಕ್ಕೂ ಆಗುವುದಿಲ್ಲ. ಒಂದೇ ದಿನದಲ್ಲಿ ವಾಪಸ್ ಬರಲು ಕಷ್ಟವಾಗುತ್ತದೆ. ಹಾಗಾಗಿ, ಇಲ್ಲಿ ಸದಸ್ಯರು ಇಲ್ಲ ಎಂದರೆ, ಸದನ ನಡೆಸುವುದು ಕಷ್ಟವಾಗುತ್ತದೆ. ನನಗೆ ವಿಷಯದ ಗಾಂಭೀರ್ಯ ಗೊತ್ತು, ಮುಖ್ಯವಾದ ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ಅದರ ಬಗ್ಗೆ ನನ್ನ ಪ್ರಶ್ನೆ ಇಲ್ಲ. I don't think it will be practically possible. ಏಕೆಂದರೆ, ನಾನು ನಮ್ಮ ಸದಸ್ಯರನ್ನೂ ಕೇಳಿದೆ. ವಾಟಾಳ್‌ರವರು ಮಧ್ಯಾಹ್ನ ನನಗೆ ಈ ಅಭಿಪ್ರಾಯ ಕೊಟ್ಟರು, ನಾನು ನಮ್ಮ ಸದಸ್ಯರಿಗೆ ಕೇಳಿದೆ, ಅದಕ್ಕೆ ಅವರು ನಾಳೆ ಹಬ್ಬಕ್ಕೆ ಹೋದವರು, ಒಂದೇ ದಿನದಲ್ಲಿ ಪುನಃ ವಾಪಸ್ ಬರುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ಸದನದಲ್ಲಿ ಎಲ್ಲಾ ಸದಸ್ಯರ ಪ್ರಶ್ನೆ ಅಲ್ಲ. ಸದನದಲ್ಲಿ ಎಷ್ಟು ಸಂಖ್ಯೆ ಸದಸ್ಯರು ಇರಬೇಕು ಎಂಬುದು ಮುಖ್ಯ. ನಮಗೆ ಕೋರಂ ಇದ್ದರೆ ನಡೆಸಬಹುದು, ಇಲ್ಲದಿದ್ದರೆ ಆಗುವುದಿಲ್ಲ. ನಾವಿರಬಹುದು, ಇನ್ನೊಬ್ಬರು ಇರಬಹುದು, ಪ್ರಶ್ನೆ ಅದಲ್ಲ. ಆದ್ದರಿಂದ, ಆ ವಾದ ಇಲ್ಲಿ ಬೇಕಾಗಿಲ್ಲ. ನಾನು ಅಧ್ಯಕ್ಷರ ಅಪ್ಪಣೆ ಕೇಳುತ್ತಿದ್ದೇನೆ. ಇಲ್ಲಿ ಇನ್ನೂ ಎರಡು ಪುಟದ ಕಾರ್ಯಕ್ರಮ ಇದೆ. ಇದು ಮುಗಿಯಬೇಕಾದರೆ,....

ಶ್ರೀ ಬಿ.ಹೆಚ್. ಬನ್ನಿಕೋಡ್:- ಕೆ.ಇ.ಬಿ. ಬಗ್ಗೆ ಇವತ್ತು ಇತ್ತು.

ಶ್ರೀ ವಾಟಾಳ್ ನಾಗರಾಜ್:- ಕೆ.ಇ.ಬಿ. ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಮತ್ತು ದೇಶಪಾಂಡೆಯವರೇ, ಸರ್ಕಾರದ ಬಗ್ಗೆ, ನಿಯಮ 68ರ ಪ್ರಕಾರ, ರೈಜ್ ಮಾಡಬೇಕೆಂದು ಹೇಳಿದ್ದರು. ಇವತ್ತು ತಪ್ಪಿಸಿಕೊಂಡು ಹೋಗುತ್ತೀರಾ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಕೆ.ಇ.ಬಿ. ಅವ್ಯವಸ್ಥೆ ಬಗ್ಗೆ ಇವತ್ತು ಧರಣಿಯನ್ನು ಪ್ರಾರಂಭಿಸುತ್ತಾ ಇದ್ದಾರೆ. ದಯವಿಟ್ಟು 15ನೇ ತಾರೀಖಿಗೆ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್:- ನಮಗೆ ಅವಕಾಶ ಬೇಕಾಗಿದೆ. ಚರ್ಚೆಯಾಗಬೇಕಾಗಿದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಮತ್ತು ಮಾನ್ಯ ದೇಶಪಾಂಡೆಯವರು ತಮ್ಮ ಹತ್ತಿರ ಬಂದು, ಎರಡುಸಾರಿ ತಮ್ಮನ್ನು ಭೇಟಿಯಾಗಿ, ನಿಯಮ 68ರೊಳಗಡೆ ಕಳುಹಿಸಿರುವುದೇನೆಂದರೆ, ಕಳೆದ ಎರಡು ವರ್ಷಗಳಿಂದ ಸರ್ಕಾರದಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ಚರ್ಚೆ ಮಾಡಬೇಕೆಂಬುದು. ಅದರ ಬಗ್ಗೆಯೂ ಕೂಡ ಕಾಲವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಅದು ಇವತ್ತಿನ ದಿವಸ ನಮ್ಮ

ಕಾರ್ಯಸೂಚಿಯಲ್ಲಿ ಸೇರಿಲ್ಲ. ಬಹಳ ಪ್ರಮುಖವಾಗಿ ಅದೂ ಕೂಡ ಚರ್ಚೆಯಾಗಬೇಕಾಗಿದೆ. ಆದರಿಂದ, ಈ ಸದನವನ್ನು ಮತ್ತೊಂದು ದಿವಸಕ್ಕೆ ಮುಂದುವರಿಸುವ ಆವಶ್ಯಕತೆ ಇದೆ ಎನ್ನತಕ್ಕಂಥಾದ್ದು ನನ್ನ ಭಾವನೆ. ದೇಶಪಾಂಡೆಯವರು ಒತ್ತಾಯ ಮಾಡಿರುವ ವಿಚಾರವೂ ಮುಖ್ಯವಾಗಿರತಕ್ಕದ್ದು. ಈ ವಿಚಾರದಲ್ಲಿ ಚರ್ಚೆಯಾಗದೇ ಇದ್ದರೆ, ರಾಜ್ಯದ ಜನ ನಮ್ಮನ್ನು ತಪ್ಪು ತಿಳಿದುಕೊಳ್ಳತಕ್ಕ ಸಂದರ್ಭ ಇದೆ. ಆದ್ದರಿಂದ, ದಯವಿಟ್ಟು ಮತ್ತೊಂದು ದಿವಸ ಮುಂದುವರಿಸಿ.

ಶ್ರೀ ಎಂ. ಮಹದೇವ್:- ಕಾಲವನ್ನು ಯಾವ ಉದ್ದೇಶಕ್ಕೋಸ್ಕರ ಇಟ್ಟಿದ್ದರೋ, ಅದು ಬೇರೆ ಬೇರೆ ಕಡೆ ಹೋಗುತ್ತಿದೆ. ವಿರೋಧಪಕ್ಷದವರು ರಾಜ್ಯದ ಆಗುಹೋಗುಗಳ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ. ಮತ್ತು ಸದನವನ್ನು ಮುಂದುವರಿಸಬೇಕೆಂದು ಹೇಳುತ್ತಿದ್ದಾರೆ. ಅವರಿಗೆ ಟೈಮಿನ ಬಗ್ಗೆ ಕಲ್ಪನೆಯೇ ಇಲ್ಲ. ವಿಷಯ ಎತ್ತೆತ್ತಲೋ ಹೋಗಿ, ಅನಗತ್ಯವಾಗಿ ಟೈಮನ್ನೆಲ್ಲಾ ವೇಸ್ಟ್ ಮಾಡುತ್ತಾರೆ. ಅಯೋಧ್ಯೆ ವಿಚಾರ ತೆಗೆದುಕೊಂಡರು, ಅದಕ್ಕೆ 3-4 ದಿವಸ ವೇಸ್ಟ್ ಮಾಡಿದರು. ಅವರು ಪ್ರಾಮುಖ್ಯವಾದ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಪಾಯಿಂಟ್ ಆಫ್ ಆರ್ಡರ್. ಅಯೋಧ್ಯೆ ಮೇಲೆ 3-4 ದಿವಸ ವೇಸ್ಟ್ ಮಾಡಿದರು ಎಂದರೆ ಏನು?

(ಗೊಂದಲ)

ಶ್ರೀ ಎಂ. ಮಹದೇವ್:- ಅಯೋಧ್ಯೆ ಬಗ್ಗೆ ಅನಗತ್ಯವಾಗಿ ಎಷ್ಟು ಟೈಮ್ ವೇಸ್ಟ್ ಮಾಡಿದರು.

(ಗೊಂದಲ)

ಶ್ರೀ ಎಂ. ಮಹದೇವ್:- ಅಯೋಧ್ಯೆ ಬಗ್ಗೆ ಅನಗತ್ಯವಾಗಿ ಎಷ್ಟೊಂದು ಟೈಮ್ ವೇಸ್ಟ್ ಮಾಡಿದರು, ಎಷ್ಟೊಂದು ಬಿಸಿನೆಸ್ ಇತ್ತು, ಅದನ್ನು ಏತಕ್ಕೆ ಚರ್ಚೆ ಮಾಡಲಿಲ್ಲ. 4-5 ದಿವಸ ಎಳೆದರಲ್ಲ, 1-2 ದಿವಸದಲ್ಲಿ ಚರ್ಚೆ ಮಾಡಬಹುದಾಗಿತ್ತು, ಮಾಡಬೇಡಿ ಎಂದು ನಾವು ಹೇಳಲಿಲ್ಲ. 4-5 ದಿವಸ ಟೈಮ್ ಏತಕ್ಕೆ ವೇಸ್ಟ್ ಮಾಡಿದಿರಿ.

ಡಾ|| ಜೀವರಾಜ್ ಆಳ್ವ:- ಈ ರಾಷ್ಟ್ರ ಉಳಿಯುತ್ತದೆಯೋ, ಹೋಗುತ್ತದೆಯೋ ಎಂಬ ವಿಚಾರ ಇತ್ತು, ಅದರ ಬಗ್ಗೆ ಮಾತನಾಡಬೇಕಾಗಿತ್ತು.

ಶ್ರೀ ಎಂ. ಮಹದೇವ್:- ಇಂಪಾರ್ಟೆಂಟ್ ಇಷ್ಯೂಸ್ ಏತಕ್ಕೆ ತೆಗೆದುಕೊಳ್ಳಲಿಲ್ಲ ಇವತ್ತು ಕೇಳುತ್ತಿದ್ದೀರಲ್ಲ,

(ಗೊಂದಲ)

ಅಧ್ಯಕ್ಷರು:- ಮಹದೇವ್ ಅವರೇ ಸಮಾಧಾನವಾಗಿರಿ.

(ನಗು)

ಶ್ರೀ ಎ.ಬಿ. ಜಕನೂರ್:- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾಳೆ ಹೋಗಿ ನಾಡಿದ್ದು ಬರುವುದಕ್ಕೆ ಬಹಳ ಜನರಿಗೆ ಆಗುವುದಿಲ್ಲ. ಸಮೀಪ ಇದ್ದವರು ಹೋಗಿ ಬರಬಹುದು, ನಾವು ನಾಲ್ಕುನೂರು ಮೈಲಿ ಹೋಗಿ ಬರುವುದಕ್ಕೆ ಆಗುವುದಿಲ್ಲ. ಉಳಿದ ವಿಷಯಗಳನ್ನು ಬರುವ ಅಧಿವೇಶನದಲ್ಲಿ ತೆಗೆದುಕೊಳ್ಳಬಹುದು, ಇವತ್ತೇ ಮುಗಿಸಿಬಿಡಿರಿ. ಸೋಮವಾರ ಬೇಡ.

ಶ್ರೀ ವಾಟಾಳ್ ನಾಗರಾಜ್:- ಇದನ್ನು ಇವತ್ತು ಮುಗಿಸುವುದಕ್ಕೆ ಸಾಧ್ಯವೇ? ಇರತಕ್ಕಂಥ ಕಾರ್ಯಕ್ರಮದ ಪ್ರಕಾರ ತಮ್ಮ ತೀರ್ಪಿಗೆ ಬಿಡುತ್ತಿದ್ದೇವೆ, ಇದನ್ನು ಮಾಡಬೇಕಾದರೆ ರಾತ್ರಿ

ಎರಡೂವರೆ ಗಂಟೆಯಾಗುತ್ತದೆ. ಯಾರು ಕುಳಿತುಕೊಳ್ಳಬೇಕು. ನಾವು ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ. ಪತ್ರಕರ್ತರು ಬಂದಿರುತ್ತಾರೆ. ಅವರು 12 ಗಂಟೆಯವರೆಗೆ ಕುಳಿತುಕೊಳ್ಳಲು ಸಾಧ್ಯವೇ, ಅವರ ಕುರ್ಚಿಗಳು ಖಾಲಿಯಾಗುತ್ತವೆ. ಈ ಕುರ್ಚಿಗಳು ಖಾಲಿಯಾಗುತ್ತವೆ.

ಅಧ್ಯಕ್ಷರು:- ಅದು ಆಗಬಾರದು.

ಶ್ರೀ ವಾಟಾಳ್ ನಾಗರಾಜ್:- ಅದು ಆಗಬಾರದು ಎಂದರೆ ನಾನು ತಮಗೆ ಹೇಳುತ್ತಿದ್ದೇನೆ, ದಯಮಾಡಿ ಸೋಮವಾರ ಒಂದು ದಿನ ನಮಗೆ ಅವಕಾಶ ಕೊಡಿರಿ, ಖಾಸಗಿ ನಿರ್ಣಯಗಳು ಒಂದು ದಿನ ಚರ್ಚೆಯಾಗಲಿ, ಖಾಸಗಿ ನಿರ್ಣಯಕ್ಕೆ ಬೆಲೆ ಬೇಡವೇ? ಖಾಸಗಿ ಸದಸ್ಯರುಗಳು ಕಳುಹಿಸಿರತಕ್ಕಂಥ ನಿರ್ಣಾಯಗಳ ಗತಿ ಏನು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ:- ನನ್ನ ಮಟ್ಟಿಗೆ ಹೇಳಬೇಕೆಂದರೆ 10-15 ನಿಮಿಷದಲ್ಲಿ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ, ಅವರಿಗೆ ಸಮಾಧಾನವಾಗುವ ಹಾಗೆ ಕೊಡುತ್ತೇನೆ.

ಅಧ್ಯಕ್ಷರು:- ನೀವು ಹದಿನೈದು ನಿಮಿಷದಲ್ಲಿ ಉತ್ತರ ಕೊಡುತ್ತೀರಿ, ಸರಿ, ಮುಂದಿನದನ್ನು ಹೇಳಿರಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗಿರುವ ಪ್ರಯುಕ್ತ ರೈತರುಗಳಿಗೆ ಗ್ರಾಹಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಚರ್ಚೆ, ಲಕ್ಷ್ಮಣಯ್ಯ ಹಾಗೂ ಶ್ರೀಮತಿ ಮೋಟಮ್ಮನವರ ಕಾಲಿಂಗ್ ಅಟೆನ್‌ಷನ್ ಇದೆ.

ಡಾ|| ಎಚ್.ಡಿ. ಲಮಾಣಿ:- ಸಾಂಡ್ರಾರವರು ಉತ್ತರ ಕೊಡಲಿ ಅಷ್ಟು ಹೊತ್ತಿಗೆ ಚೀಫ್ ಮಿನಿಸ್ಟರ್‌ರವರು ಬರುತ್ತಾರೆ, ಆಮೇಲೆ ಒಂದು ನಿರ್ಣಯ ತೆಗೆದುಕೊಳ್ಳಬಹುದು.

ಅಧ್ಯಕ್ಷರು:- ಅವರು ಉತ್ತರ ಕೊಡುವುದಕ್ಕೆ ಇನ್ನೂ ಮೊದಲು ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಭಾಷಣಕಾರರು ಬಹಳ ಜನ ಇದ್ದಾರೆ, ಅದು ಆದನಂತರ ಉತ್ತರ ಎಷ್ಟು ಹೊತ್ತಿಗೆ ಮುಖ್ಯಮಂತ್ರಿಗಳು ಬರುತ್ತಾರೆ, ಅಷ್ಟು ಹೊತ್ತಿಗೆ ಏಳೂವರೆ ಆಗುತ್ತದೆ, ಮುಖ್ಯ ಸಚೇತಕರು ತಾವು ತಯಾರಾಗಿರಬೇಕು.

ಡಾ|| ಎಚ್.ಡಿ. ಲಮಾಣಿ:- ತಾವು ಮಾತನಾಡಿ, ಅವರು ಬರುತ್ತಾರೆ.

ಅಧ್ಯಕ್ಷರು:- ಅವರು ಬರುವವರೆಗೆ ನೀವು ಮಾತನಾಡುತ್ತಾ ಇರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಬೆಳಿಗ್ಗೆ ಬಂದರೆ ಏನು ಮಾಡುವುದು?

ಶ್ರೀ ಎ.ಕೆ. ಅನಂತಕೃಷ್ಣ:- ಈಗ ಇರುವ ವಿಷಯ ಮಾತನಾಡಿ ಮುಗಿಸಿರಿ.

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೇ, ಬಹುಶಃ ಬರೀ ಮೇಲ್ಮಟ್ಟದ ವಾದವನ್ನು ಮಾನ್ಯ ವಿರೋಧಪಕ್ಷದ ನಾಯಕರು ಮಂಡಿಸಿದರು. ಅಲ್ಲಿ ವಾಸ್ತವವಾಗಿ ಏನಾಗುತ್ತಿದೆ ಎಂಬ ಬಗ್ಗೆ ಎರಡು ಮಾತನ್ನು ಹೇಳಬೇಕಾಗಿದೆ. ಇವರು ಕೊಟ್ಟಿರುವ ಸರ್ಕ್ಯುಲರ್, ಇವರು ಕೊಟ್ಟಿರುವ ನಿಯಮಗಳನ್ನು ಅನುಸರಿಸಿ ನಾವು ಆಶ್ರಯ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಒಂದು ಸಲ ಫ್ರೀ ಆಫ್ ಕಾಸ್ಟ್ ಸೈಟ್‌ಗಳನ್ನು ಕೊಡಬೇಕೆಂದು ಒಂದು ಸರ್ಕ್ಯುಲರ್ ಕೊಟ್ಟಿದ್ದಾರೆ. ಈಗ ಮುನಿಸಿಪಲ್ ಏರಿಯಾದಲ್ಲಿ 50 ಪರ್‌ಸೆಂಟ್ ಕಾಸ್ಟ್ ತೆಗೆದುಕೊಳ್ಳಬೇಕೆಂದು ಸರ್ಕ್ಯುಲರ್ ಕೊಟ್ಟಿದ್ದಾರೆ. ನಮ್ಮ ಇಂಟಗ್ರಿಟಿ, ನಮ್ಮ ಯೋಗ್ಯತೆಯನ್ನು ಜನ ಅಳೆಯುವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ತೀರಾ ಬಡವರಿಗೆ ನಾವು ಸೈಟ್ ಕೊಡುತ್ತಿದ್ದೇವೆ. ಪುರಸಭೆ ಏರಿಯಾದಲ್ಲಿ 50 ಪರ್ಸೆಂಟ್ ಹಣವನ್ನು ವಸೂಲಿ ಮಾಡಬೇಕೆಂದು ಆಶ್ರಯ ಸಮಿತಿ

ಅಧ್ಯಕ್ಷರಿಗೆ ನಿರ್ದೇಶನ ಕೊಟ್ಟರು. ಹಣ ವಸೂಲಿ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಇದನ್ನು ಸನ್ಮಾನ್ಯ ಮಂತ್ರಿಗಳು ವೇವ್ ಮಾಡಬೇಕಾಗುತ್ತದೆ. ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ತೀರಾ ನಿರ್ಗತಿಕರಿಗೆ ಕೊಡುತ್ತಿದ್ದೇವೆ, ಒಂದು ಸೈಟಿಗೆ 350 ರೂಪಾಯಿ ಭಾರಿ ದೊಡ್ಡ ಹಣ ಅಲ್ಲ. ಎರಡನೆಯದು ಜಮೀನನ್ನು ನಾವು ರೈತರಿಂದ ಅಥವಾ ಇತರರಿಂದ ಕೊಂಡುಕೊಳ್ಳಬೇಕಾದರೆ ಒಂದು ಆದೇಶ ಮೊದಲು ಕೊಟ್ಟರು, ಮಾರ್ಕೆಟ್ ವ್ಯಾಲ್ಯೂ ಮೇಲೆ 30 ಪರ್ಸೆಂಟ್ ಎನ್‌ಹ್ಯಾನ್ಸ್‌ಮೆಂಟ್ ಕೊಟ್ಟು ಲೋಕಲ್ ಕಮಿಟಿಯವರು ತೆಗೆದುಕೊಳ್ಳಬಹುದು, ಅದನ್ನು ಮೀರಿದರೆ ಜಿಲ್ಲಾಧಿಕಾರಿಗಳಿಗೆ ಬರೆಯಬಹುದು ಎಂದು ಹೇಳಿದರು. ಈಗ ಒಂದು ಸೈಟಿಗೆ 750 ರೂಪಾಯಿ ಮೇಲೆ ಪರ್ಚೇಸ್ ಮಾಡಬಾರದೆಂದು ಕೊಟ್ಟಿದ್ದಾರೆ. ನಿನ್ನೆ ತೆಗೆದುಕೊಂಡು ಹೋಗಿ 25-30 ಸಾವಿರ ಕೊಟ್ಟಿದ್ದೇವೆ ಒಂದು ಎಕರೆಗೆ, ಇವತ್ತು ಅದು 12-13 ಸಾವಿರಕ್ಕೆ ಬಂದು ನಿಲ್ಲುತ್ತದೆ. ಇಷ್ಟಕ್ಕೆ ಯಾರೂ ಜಮೀನನ್ನು ಕೊಡುವುದಿಲ್ಲ.

6-10 P.M.

ಇದು ಪ್ರಮುಖವಾದ ಸಮಸ್ಯೆ. ಮಾನ್ಯ ಅಧ್ಯಕ್ಷರೇ ಮುಖ್ಯವಾಗಿ ಹೋಬಳಿ ಕೇಂದ್ರಗಳಲ್ಲಿ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ನಾವು ಸೈಟ್‌ಗಳನ್ನು ಕೊಡಬೇಕಾಗಿತ್ತು. ವಾಸ್ತವವಾಗಿ ಅಲ್ಲಿ ಯಾರೂ ಕೊಟ್ಟಿಲ್ಲ. ಯಾವ ಕ್ಷೇತ್ರದಲ್ಲೂ ಕೊಟ್ಟಿಲ್ಲವೆಂದು ನಾನು ನಿಮಗೆ ಘಣ ತೊಟ್ಟು ಹೇಳುತ್ತೇನೆ. ಏಕೆಂದರೆ ಅಲ್ಲಿ ಎಲ್ಲೂ ಸರ್ಕಾರಿ ಜಾಗ ಇಲ್ಲ. ಸರ್ಕಾರಿ ಜಾಗ ಇಲ್ಲ ಯಾರೋ ಖಾಸಗೀಯವರಿಂದ ಕೊಂಡುಕೊಳ್ಳಬೇಕೆಂದರೆ ತಾವು ನೂರೆಂಟು ನಿಯಮಗಳನ್ನು ಹಾಕಿದ್ದೀರಿ. ಒಂದು ವಾರಕ್ಕೆ ಒಂದೊಂದು ಸರ್ಕ್ಯುಲರ್ಸ್ ಬರುತ್ತದೆ ಈ ಆಶ್ರಯ ಸಮಿತಿಯಲ್ಲಿ. ನಮ್ಮನ್ನು ಅಧ್ಯಕ್ಷಗಿರಿ ಮಾಡಬೇಡಿ ಎಂದು ಆಚೆ ಇಟ್ಟು ಬಿಡಬೇಕು. ಏಕೆಂದರೆ ಈ ತರಹ ಮಾಡಿಕೊಂಡು ಹೋದರೆ ಆಗುವುದಿಲ್ಲ. ಒಂದು ತೀರ್ಮಾನ ಮಾಡಿ ಒಂದು ಯೋಜನೆ ಹಾಕಿ. ಒಂದು ವರ್ಷ 6 ತಿಂಗಳು ಕೆಲಸ ಮಾಡುವುದಕ್ಕೆ ಬಿಡಿ. ನಾವು ಸುಮಾರು 10 ಸಲ ಕೇಳಿದ್ದೇವೆ. ಸೇಂದಿ ವನ ಎಲ್ಲಿವೆ ಅದನ್ನು ರಿಲೀಜ್ ಮಾಡಿ ಕೊಡಿ ಅಂತ. ಗ್ರಾಮಾಂತರ ಪ್ರದೇಶಗಳಲ್ಲಿ ಎಕ್ಸೈಜ್ ಲ್ಯಾಂಡ್ ಎಂದು ಏನಿದೆ ಅಲ್ಲಿ ಮರಗಿಡಗಳು ಇಲ್ಲ. ಈಚಲ ಗಿಡಗಳು ಒಂದೂ ಇಲ್ಲ. ಸೇಂದಿ ವನ ಬಿಡಿಸಿಕೊಟ್ಟರೆ ಅಲ್ಲಿ ನಾವು ಸೈಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರಿ ಕರಾಬು ಜಾಗ ಯಾವುದು ಗ್ರಾಮದ ಪಕ್ಕದಲ್ಲಿ ಇಲ್ಲ. ಯಾರೂ ಗ್ರಾಮಠಾಣವನ್ನು ಮಂಡಲ ಪಂಚಾಯತಿಯವರು ಉಳಿಸಿ ಹೋಗಿಲ್ಲ. ಗೋಮಾಳವನ್ನು ಬಗರ್ ಹುಕ್ಕುಂ ನಿಂದ ಆಚೆ ಬಿಡಿಸಿ ಅಂತ ಹೇಳಿ ವ್ಯಾಜ್ಯಗಳನ್ನು ಹಚ್ಚುವುದಕ್ಕೆ ನಾವು ತಯಾರು ಇಲ್ಲ. ಇಂತಹ ಸಣ್ಣಪುಟ್ಟ ದೋಷಗಳನ್ನು ಬಗೆಹರಿಸುವುದಕ್ಕೆ ಸರ್ಕಾರ ಮನಸ್ಸು ಮಾಡದಿದ್ದರೆ ಆಶ್ರಯ ಸಮಿತಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಇವತ್ತು ಏನಾದರೂ ಸೈಟ್ ಕೊಟ್ಟಿದ್ದರೆ, ಎಲ್ಲೋ ದಿನ್ನೆ ಮೇಲೆ ಭೋರೆ ಮೇಲೆ ಗುಡ್ಡದ ಕೆಳಗೆ ಕೊಟ್ಟಿದ್ದೇವೆ. ಇದನ್ನು ನಾನು ಭಾರಿ ಸಾಧನೆ ಮಾಡಿದ್ದೇನೆ 4 ಲಕ್ಷ 5 ಲಕ್ಷ ಕೊಟ್ಟಿದ್ದೇವೆಂದು ಒಪ್ಪಿಕೊಂಡರೆ ಏನು ಬಂತು, ಆ ಜನರು ಅಲ್ಲಿ ವಾಸ ಮಾಡುವಂತಹ ಸ್ಥಿತಿಯಲ್ಲಿ ಇಲ್ಲ. ಸೈಟ್ ಕೊಡುವುದಾದರೆ ಗ್ರಾಮದ ಪಕ್ಕದ ಹೊಲಗಳಲ್ಲಿ ಕೊಡಬೇಕು. ಇವತ್ತು ನೀವು ಹೇಳುವ ಧಾರಣೆಯಲ್ಲಿ ಸೈಟ್ ಕೊಡುವುದಕ್ಕಾಗುವುದಿಲ್ಲ. 700 ರೂಪಾಯಿಗಳಲ್ಲಿ ಒಂದು ಸೈಟ್ ಕೊಂಡುಕೊಳ್ಳಿ ಎಂದು ಹೇಳಿದರೆ ಯಾರೂ ಕೊಡುವುದಿಲ್ಲ. ಇದರಲ್ಲಿ ಲೇ ಔಟ್ ಚಾರ್ಜಸ್ ಸೇರಿಸಿ ಕೊಡಿ ಅಂತ ಹೇಳಿದ್ದಾರೆ. ಇನ್ನು ಮುನಿಸಿಪಾಲಿಟಿ ಏರಿಯಾದಲ್ಲಿ ಬಡವರಿಗೆ ಸೈಟ್ ಕೊಟ್ಟಿದ್ದೇವೆ. ನೀವು ಅವರಿಂದ 50 ಪರ್ಸೆಂಟ್ ಕಾಸ್ಟ್ ತೆಗೆದುಕೊಳ್ಳಿ ಅಂತ ಆದೇಶವನ್ನು ಏನು ಕೊಟ್ಟಿದ್ದೀರಿ ಅದನ್ನು ವಾಪಸ್ಸ್ ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸಿ ತಮ್ಮ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

† ಡಾ|| ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೇ, ಜಾರ್ಜ್‌ರವರು ಹಿಂದಿನ ಸರ್ಕಾರದ

ಮಂತ್ರಿಗಳು. ಅವರ ವಿಚಾರಧಾರೆ ಅವರ ವಾದವನ್ನು ಈ ಸಭೆಯ ಮುಂದೆ ಇಟ್ಟರು. ನಾನು ಈ ಆಶ್ರಯ ಬಗ್ಗೆ ಯಾವ ಟೀಕೆಯನ್ನು ಮಾಡಿಲ್ಲ, ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಟೀಕೆ ಮಾಡಿಲ್ಲ, ತಾವು ಗಮನಿಸಿಲ್ಲವೆಂದು ಕಾಣುತ್ತದೆ. ಆದರೆ ಒಂದು ವಿಚಾರವನ್ನು, ಒಂದು ಮಾತನ್ನು ಹೇಳುತ್ತೇನೆ ಇದು ಒಂದು ದುಷ್ಟಕೂಟ ಅಂತ. ರಾಜಕೀಯವಾಗಿ ಒಂದು "unholly alliance" ರಾಜ್ಯದಲ್ಲಿ ನಡೆಯಿತು. Unholly alliance ಏನಾಯಿತು ಎಂದು ಹೇಳಿ. ನಮ್ಮ ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರ ರಾಜಕೀಯ ಬಂಧುತ್ವ. ಈ ಬಂಧುತ್ವದ ಕಾರಣವೇ ಇಂತಹ ದುಷ್ಟ ಕೂಟ. ರಾಜ್ಯದ ಬೊಕ್ಕಸ ದರೋಡೆ. ಇದನ್ನು ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. Unparalleled nexus between the politicians and bureaucracy was created. ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಅವರು ಏನು ಹೇಳಿದರು ಅಧಿಕಾರಿಗಳ ಹತ್ತಿರ ಇದರ ಬಗ್ಗೆ ಚರ್ಚೆ ಮಾಡಿಲ್ಲ. ಸಂಬಂಧಪಟ್ಟ ಕಮಿಟಿಗಳಲ್ಲಿ ಆಗಿಲ್ಲ, Of course, it was his thinking. But he corraborated to say that cabinet had to take a decision, there was a committee and there is a manual prescribed. ನಾವು ಸರ್ಕಾರದಲ್ಲಿ ಇದ್ದೆವು. ನೀವು ಸರ್ಕಾರದಲ್ಲಿ ಇದ್ದವರು. ಈ ವಿಚಾರವನ್ನು ಹೇಗೆ ಮಾಡಬಹುದು ಎನ್ನುವುದು ನಮಗೆ ಗೊತ್ತಿದೆ ಆದರೆ ಈ ಸರಕಾರದಲ್ಲಿ ಅತ್ಯಂತ ವಿಶ್ವಾಸಪೂರಕವಾದ ನನ್ನ ಮನವಿ. ನಿಮ್ಮ ಕ್ಲಾಸಿಕ್ ಕಂಪ್ಯೂಟರ್ಸ್ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿಗೆ ಹೋಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಇದರ ಕಂಟ್ರಾಕ್ಟರ್ಸ್ ಆಂಧ್ರದಿಂದ ಬಂದಿದ್ದಾರೆ, ಇನ್ನೊಬ್ಬರು ಮಹಾರಾಷ್ಟ್ರದಿಂದ ಬಂದಿದ್ದಾರೆ, ಮತ್ತು ಇದಕ್ಕಿಂತ ಹೆಚ್ಚು the indulgence that you have created. ಇವತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪ್ರತಿಷ್ಠೆಯ ಪ್ರಶ್ನೆಗಾಗಲೀ, ರಾಜಕೀಯಪಕ್ಷದ ಒಂದು ಖಜಾನೆಗೆ ಭರ್ತಿ ಮಾಡುವುದಕ್ಕಾಗಲೀ, ಈ ರಾಜ್ಯದ ಜನತೆಗೆ ಖಜಾನೆಗೆ ಅದು ಒಂದು ದೊಡ್ಡ ದೊಡ್ಡ ವಿಚಾರಭಾದೆಯನ್ನು ಇಟ್ಟಿರಿ. ಆಗ ನಾನು ನಿಮ್ಮನ್ನು ಹೊಗಳಿದೆ. ಆಶ್ರಯ ಯೋಜನೆ ಬಗ್ಗೆ ಮಾತನಾಡುತ್ತಾ ಮಾನ್ಯ ಜಾರ್ಜ್‌ರವರು ವಿಶ್ವದ ಬಗ್ಗೆಯೂ ಹೇಳಿದರು. ನಾನು ಬೆಂಗಳೂರಿನಲ್ಲಿ ಯಾವುದೋ ಒಂದು ಸಭೆಗೆ ಹೋದಾಗ ಹೇಳಿದೆ, ವಿಶ್ವದ ಯಾವ ಒಂದು ಕಾರ್ಯಕ್ರಮವನ್ನು ನಿಯೋಜಿಸಿದ್ದೀರಿ ದಯಮಾಡಿ ಅದನ್ನು ಚೆನ್ನಾಗಿ ಮಾಡಿ, ಕರ್ನಾಟಕ ರಾಜ್ಯದಲ್ಲಿ ಯಾರು ದಟ್ಟದರಿಧ್ರರಿದ್ದಾರೆ, ಅವರಿಗೂ ಇದರಿಂದ ಸಹಾಯವಾಗಿ, ಮಹಿಳೆಯರಿಗೆ ಸಹಾಯಧನವಾಗುವುದಾದರೆ ನಿಮಗೆ ನಮ್ಮ ಸಪೋರ್ಟ್ ಇದೆ ಎನ್ನುವ ಮಾತನ್ನು ಹೇಳಿದೆ. ಆದರೆ ಈಗ ಏನು ವಂಚನೆ ಆಗಿದೆ, ಅದು One of the greatest crimes that has been perpetuated on the people of Karnataka it is unparallel in the history. ಇವತ್ತು ನೀವು ಮೋಸ ಮಾಡಿದ್ದೀರಿ, ಅನ್ಯಾಯ ಮಾಡಿದ್ದೀರಿ, ಬರೀ ಯಾರೋ ಒಬ್ಬ ಅಧಿಕಾರಿಯನ್ನು ಸಸ್‌ಪೆಂಡ್ ಮಾಡುವುದು ಯಾವುದೋ ಒಬ್ಬ ಡೆಪ್ಯೂಟಿ ಡೈರೆಕ್ಟರ್‌ನ್ನು ಸಸ್ಪೆಂಡ್ ಮಾಡುವುದು, ಇದರಿಂದ ಸಮಸ್ಯೆ ಬಗೆ ಹರಿಯುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಅವರ ಹತ್ತಿರ ನಮ್ಮ ಭಾವನೆಗಳನ್ನು ಇಟ್ಟಿದ್ದೇವೆ. ಏನು ಹೊಸ ರೀತಿಯ ಸರ್ಕಾರವನ್ನು ಕೊಡುತ್ತೇನೆಂದು ಹೇಳಿದ್ದಾರೆ. He has said there will be a major surgical operation. ಎಂದು ಹೇಳಿದ್ದಾರೆ. ಮಾನ್ಯಮುಖ್ಯ ಮಂತ್ರಿಗಳು ಬರುವ ಮೊದಲು ವಿರೋಧಪಕ್ಷದ ನಾಯಕರು ನೀವು ಸಹಿ ಹಾಕಿದಂತಹ ಒಂದು ಮೆಮೋರಾಂಡಂ he wanted to place it before the House. ಬಂತು ಅದು. ನಮ್ಮ ಪ್ರಧಾನ ಮಂತ್ರಿಗಳಿಗೆ ಅದನ್ನು ಕಳುಹಿಸಿದಿರಿ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ನನಗೆ ಕೊಟ್ಟಿಲ್ಲ. Categorically on oath I can tell this.

Dr.Jeevaraj Alva:- But I can earnestly tell, we have tremendous

confidence. ಏನೋ ಒಂದು ಹೊಸ ಚರಿತ್ರೆಯನ್ನು ಮಾಡಲಿಕ್ಕೆ ಮುಖ್ಯಮಂತ್ರಿಗಳು ಹೊರಟಿದ್ದಾರೆ. ಏಕೆಂದರೆ, ಅವರು ಎಲ್ಲಿ ಈ ಹಳಕ್ಕೆ ಬೀಳುತ್ತಾರೋ ಎಂದು ನಮಗೆ ಹೆದರಿಕೆ. ಏಕೆಂದರೆ, ಏನೋ ಹೊಸ ಭಾವನೆಯಿಂದ, ಕರ್ನಾಟಕಕ್ಕೆ ನೂರು ದಿವಸ ಕಾಲದಲ್ಲಿ ಹೊಸ ಸರ್ಕಾರ ಕೊಡಬೇಕು ನಾವು ಒಂದು ಸ್ವಚ್ಛ ಸರ್ಕಾರ ಕೊಡುತ್ತೇವೆ ಎನ್ನುವ ಭಾವನೆಯನ್ನು ಉಂಟುಮಾಡುತ್ತೇವೆಂದು ಬಹಳ ವೀರಾವೇಶವಾಗಿ ಹೇಳಿಕೊಂಡಿದ್ದಾರೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ, ಮುಖ್ಯಮಂತ್ರಿಗಳು ಇಲ್ಲೇ ಇರುವುದರಿಂದ, ಬಹಳ ಧೈರ್ಯವಾಗಿ ಕ್ಲಾಸಿಕ್ ಕಂಪ್ಯೂಟರ್ ಬಗ್ಗೆ ಸಿಬಿಐ ಎನ್‌ಕ್ವೈರಿಯನ್ನು ಘೋಷಣೆ ಮಾಡಿದಿರಿ? ಇದರ ಬಗ್ಗೆಯೂ ಕೂಡ there is a clear nexus. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆದಿದೆ. ಅದನ್ನು ಪೂರ್ಣವಾಗಿ ಸನ್ಮಾನ್ಯ ದೇಶಪಾಂಡೆಯವರು ಕೊಟ್ಟಿದ್ದಾರೆ. What pains me is, those two years of almost painful era, erosion of credibility of all politicians, ಅದಕ್ಕಿಂತ ಹೆಚ್ಚಾಗಿ ಬಹಳಷ್ಟು ಕಾಲದಿಂದ ರಾಜಕಾರಣಿಗಳ ಬಗ್ಗೆ ಬಹಳ ಕಹಿ ಭಾವನೆ ಕಟು ಭಾವನೆಯನ್ನು ಎಲ್ಲಾ ಕಡೆ ಕೇಳುತ್ತಿದ್ದೇವೆ. ಬಹಳ ಕೆಟ್ಟ ಜನ, ನಾವೆಲ್ಲಾ ಆದು ಮಾಡಿದ್ದೇವೆ ಅಂಥ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಪತ್ರಿಕಾ ವರದಿಗಾರು ಸಂಪೂರ್ಣವಾಗಿ ಹೊರಟು ಹೋಗಿದ್ದಾರೆ. ನಾವು ಇಲ್ಲಿ ಏನು ಮಾತನಾಡುತ್ತೇವೆಂದು ಜನಕ್ಕೆ ಗೊತ್ತಾಗಬೇಕಾಗಿದೆ. ಸಭೆಯನ್ನು ಮುಂದೂಡಬೇಕೆಂದು ನಮ್ಮ ಒತ್ತಾಯ ಇದೆ. ಬಹುಶಃ ಅವರ ಅಭಿಪ್ರಾಯವೂ ಅದೇ ಆಗಿರುತ್ತದೆ. ಅವರೂ ಬೆಳಿಗ್ಗೆ 9 ಗಂಟೆಗೆ ಬಂದವರು. ಈಗ ಆರೂಕಾಲು ಗಂಟೆ ಆಯಿತು. ಬೇಕಾದರೆ ಇನ್ನೂ ಒಂದೆರಡು ದಿನ ಅಧಿವೇಶನವನ್ನು ಮುಂದುವರಿಸಿ ಈಗ ಸಭೆಯನ್ನು ಕೊನೆಗೊಳಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಬರುವುದಕ್ಕಿಂತ ಮುಂಚೆ ಈ ವಿಷಯ ಪ್ರಸ್ತಾಪವಾಯಿತು. ಸದನವನ್ನು ಇನ್ನೂ ಎರಡುಮೂರು ದಿವಸ ಮಾಡಿದರೆ ನನ್ನದೇನೂ ವಿರೋಧವಿಲ್ಲ. ಒಂದು ವಾರ ಬೇಕಾದರೂ ಮಾಡಿರಿ. ನನ್ನದು ಅದಕ್ಕೂ ವಿರೋಧವಿಲ್ಲ. ನಾನು ಏನು ಹೇಳುತ್ತೇನೆಂದರೆ, ನಾಳೆ ಹಬ್ಬ ಇದೆ, ಊರಿಗೆ ಹೋದ ಸದಸ್ಯರು ನಾಡಿದ್ದು ವಾಪಸ್ ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಅದೇ ನನಗೆ ಒಂದು ಶಂಕೆ ಇರುವುದು. ಹಾಗೆಯೇ ಒಂದು ಕೆಲಸ ಮಾಡಬಹುದು, ಇವತ್ತು ಮಾನ್ಯ ಸಚಿವರು ಆಶ್ರಯದ ಬಗ್ಗೆ ಉತ್ತರ ಕೊಡಲಿ. ಮಾನ್ಯ ಅಧ್ಯಕ್ಷರೇ ತಾವು ಏನು ನಿರ್ಣಯ ತೆಗೆದುಕೊಳ್ಳುತ್ತೀರಿ, ಸದನ ಮುಂದುವರಿಸಬೇಕೆಂದರೆ ಮಾಡಿ, 2 ದಿನ ಅಂದರೆ 2 ದಿನ ಮಾಡಿ. 4 ದಿನ ಅಂದರೆ 4 ದಿನ ಮಾಡಿ. 8 ದಿನ ಅಂದರೆ 8 ದಿನ ಮಾಡಿರಿ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಏಕೆಂದರೆ, ಪ್ರತಿಯೊಂದು ವಿಷಯದ ಬಗ್ಗೆಯೂ ಚರ್ಚೆಯಾಗಬೇಕು. ನನ್ನದಿಷ್ಟೇ ಭಯ, ನಾಳೆ ಹಬ್ಬ ಇದೆ. ಇವತ್ತು ಶಾಸಕರು ಹೋಗುತ್ತಾರೆ, ನಾಡಿದ್ದು ಬರುತ್ತಾರೋ ಇಲ್ಲವೋ? ಗೊತ್ತಿಲ್ಲ. ಸಾಕಷ್ಟು ಜನ ಇವತ್ತು ಹೊರಟುಬಿಟ್ಟಿದ್ದಾರೆ. ಸದನದಲ್ಲಿ ಐದಾರು ಜನ ಮಾತ್ರ ಉಳಿದಿದ್ದಾರೆ. ಇದು ತಮಗೆ ಬಿಟ್ಟ ಪ್ರಶ್ನೆ. ತಾವು ಏನು ಆದೇಶ ಮಾಡುತ್ತೀರಿ ಆ ಪ್ರಕಾರ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ:- ಶುಕ್ರವಾರಕ್ಕೆ ಬದಲಾಗಿ ಸೋಮವಾರಕ್ಕೆ ಮುಂದೂಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ತಮ್ಮ ಗಮನ ಸೆಳೆದೆ. ನಮ್ಮ ಕಾರ್ಯಕ್ರಮ ಪಟ್ಟಿ ಪ್ರಕಾರ ಇನ್ನೂ ಒಂದೂವರೆ ಗಂಟೆ ಕಾಲ ಚರ್ಚೆ ಮಾಡಿದರೂ ಇನ್ನೂ ಇರತಕ್ಕಂಥ ವಿಚಾರಗಳಿವೆ. ಈಗಾಗಲೇ 6 ಗಂಟೆ ಆಯಿತು. ನಾವೂ ಬೆಳಿಗ್ಗೆ 9 ಗಂಟೆಗಿಂತ ಮುಂಚೆ ಮನೆ ಬಿಟ್ಟವರು. ಈಗಾಗಲೇ ಪತ್ರಕರ್ತರೂ ಹೊರಟು ಹೋಗಿದ್ದಾರೆ. ಅವರೂ ಪತ್ರಿಕೆಗಳಿಗೆ ಬರೆಯಬೇಕಾಗುತ್ತದೆ. ಎಲ್ಲರೂ ಹೊರಗಡೆ ಹೋಗಿದ್ದಾರೆ. ಶುಕ್ರವಾರ, ಶನಿವಾರ ಅಥವಾ ಸೋಮವಾರಕ್ಕೆ ಸಭೆಯನ್ನು

ಮುಂದೂಡಿದರೂ ನಮ್ಮ ಅಭ್ಯಂತರವಿಲ್ಲ. ಈಗ ಎಲ್ಲರೂ ನಾಳೆಯ ಹಬ್ಬಕ್ಕೆ ಹೋಗಿದ್ದಾರೆ. ಅವರೆಲ್ಲಾ ನಾಡಿದ್ದು ಬರಬೇಕೆನ್ನುವ ವಾದ ಇದೆ. ಅಧ್ಯಕ್ಷರೆ, ನಾನು ಹೇಳುತ್ತಿದ್ದೇನೆ. ದಯಮಾಡಿ ಸಭೆಯನ್ನು ಸೋಮವಾರಕ್ಕೆ ಮುಂದೂಡಿ. ಸೋಮವಾರ ನಾವು ಪುನಃ ಬಂದು ಕುಳಿತುಕೊಳ್ಳೋಣ. ಆದ್ದರಿಂದ ದಯಮಾಡಿ ಈ ಬಗ್ಗೆ ಒಂದು ನಿರ್ಣಯ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಇದರ ಜೊತೆಗೆ ಯಾವುದೇ ಖಾಸಗಿ ನಿರ್ಣಯಗಳು ಸಭೆಯಲ್ಲಿ ಬರಲೇ ಇಲ್ಲ. ಹೋದ ಶುಕ್ರವಾರ ಕೂಡ ಖಾಸಗೀ ನಿರ್ಣಯಗಳ ಬಗ್ಗೆ ಚರ್ಚೆ ಮಾಡಿಲ್ಲ. ನಾವು ಸುಮ್ಮನೆ ಇವೊತ್ತು ಖಾಸಗಿ ನಿರ್ಣಯಗಳು, ಖಾಸಗೀ ಕಲಾಪಗಳು ಎಂದು ಹೇಳುವುದು, ಹೀಗಾಗಿ ನಾವು ಖಾಸಗೀ ಕಲಾಪಗಳನ್ನು ನಡೆಸಲೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸವೇ ಕಾರ್ಯಕಲಾಪಗಳು ಮುಗಿಯಬೇಕಾಗಿತ್ತು. ಯಾವುದೇ ವಿಚಾರಗಳ ಮೇಲೆ ಚರ್ಚೆಗೆ .ಅಡ್ಡಿ ಬರತಕ್ಕಂಥ ಅಭಿಪ್ರಾಯ ನಮಗೆ ಇಲ್ಲ. ಅದು ಇವೊತ್ತು ಆದರೂ ಆಗಬಹುದು ಎಂದು ನಾವು ಒಪ್ಪಿಕೊಂಡಿದ್ದೇವೆ ಆ ಚರ್ಚೆಯನ್ನು ಈ ಅಧಿವೇಶನದಲ್ಲಿ ಅಲ್ಲದಿದ್ದರೂ ಮುಂದಿನ ಅಧಿವೇಶನದಲ್ಲಿ ಮಾಡಬಹುದು. ಈ ಅಧಿವೇಶನಲ್ಲಿಯೇ ಆಗಬೇಕೆಂದರೆ, ಮುಂದುವರಿಸಬೇಕಾಗುತ್ತದೆ. ಇಲ್ಲಿರುವ ಪ್ರಶ್ನೆ ಅಂದರೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಪ್ರಕಾರ, ನಾಳೆ ಹಬ್ಬ ಇದೆ, ನಾಡಿದ್ದು ಎಷ್ಟು ಜನರು ಬರುತ್ತಾರೋ ಇಲ್ಲವೋ ಎನ್ನುವುದು ಸಂಶಯ, ಹಾಗಾಗಿ ಒಂದು ಅಭಾಸಕ್ಕೆ ನಾವು ಗುರಿಯಾಗಬಾರದು. ಸದಸ್ಯರು ಕಡಿಮೆ ಹಾಜರಿದ್ದರೆ ಅದು ಒಂದು ತರಹ ಅಭಾಸವಾಗುತ್ತದೆ. ಏನಿದ್ದರೂ ಈ ವಾರದಲ್ಲಿ ಮುಗಿಸಬೇಕು. ಆದ್ದರಿಂದ ತಾವುಗಳೆಲ್ಲರೂ ಒಪ್ಪುವುದಾದರೆ ಶನಿವಾರ ದಿವಸ ತೆಗೆದುಕೊಳ್ಳೋಣ. ಮತ್ತೆ ಸೋಮವಾರ ಅಂದರೆ ಅದು ಮಂಗಳವಾರಕ್ಕೂ ಹೋಗಬಹುದು. ವಿಧಾನಪರಿಷತ್ತು ಕೂಡ ಶನಿವಾರ ಸೇರುತ್ತದೆ. ಆದ್ದರಿಂದ ಹಬ್ಬ ಮುಗಿಸಿ ಬರಲು ಅನುಕೂಲವಾಗುವಂತೆ ಮಾಡಿ ಶನಿವಾರ ದಿವಸ ಸಭೆಯನ್ನು ಇಟ್ಟುಕೊಳ್ಳೊಣ ಇದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯವೂ ಆಗಿರಬಹುದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸದಸ್ಯರ ಅಭಿಪ್ರಾಯ ನೋಡಿಕೊಂಡು ನಾನು ಹೇಳುತ್ತಾ ಇದ್ದೇನೆ. ಶನಿವಾರ ಎಷ್ಟು ಹೊತ್ತಾದರೂ ಅಡ್ಡಿ ಇಲ್ಲ ಮುಗಿಸೋಣ.

ಶ್ರೀ ವಾಟಾಳ್ ನಾಗರಾಜ್:- ಶನಿವಾರ, ಭಾನುವಾರ ರಜೆ ಮುಗಿಸಿಕೊಂಡು ಸೋಮವಾರ ಬರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗ ಪ್ರಶ್ನೆ ಏನೆಂದರೆ, ಪ್ರಸಕ್ತ ಅಧಿವೇಶನವನ್ನು ಈ ವಾರದಲ್ಲಿ ಮುಗಿಸಿಬಿಡೋಣ. ಮತ್ತೆ ಸೋಮವಾರ ಅಂದರೆ ಪುನಃ ಮಂಗಳವಾರಕ್ಕೂ ಹೋಗಬಹುದು. ಇದು 12ನೇ ತಾರೀಖಿಗೆ ಮುಗಿಯಬೇಕಾಗಿತ್ತು. ಚರ್ಚೆ ಮಾಡಲು ನಾವು ಎಂದೂ ಅಡ್ಡಿ ಮಾಡುವುದಿಲ್ಲ. ಸ್ವಲ್ಪ ಅನಾನುಕೂಲತೆ ಎಲ್ಲರಿಗೂ ಆಗುತ್ತದೆ. ಕೆಲವರಿಗೆ ಶನಿವಾರ ಕಾರ್ಯಕ್ರಮ ಇದ್ದರೆ, ಕೆಲವರಿಗೆ ಸೋಮವಾರ ಇರಬಹುದು. ನಾವುಗಳು ಈ ಸದನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಶನಿವಾರ ಅಧಿವೇಶನವನ್ನು ಮುಗಿಸಿದರೆ, ಒಳ್ಳೆಯದಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಶನಿವಾರ ಸೇರುವುದಕ್ಕಿಂತ ಶುಕ್ರವಾರ ಸೇರಿದರೆ ಒಂದು ದಿನ ಮುಂಚೆ ಸೇರಿ ಶನಿವಾರ ಮುಂದುವರಿಸುವುದಕ್ಕೂ ಅನುಕೂಲವಾಗುತ್ತದೆ. ಅನಾನುಕೂಲ ಸ್ವಲ್ಪ ಮಟ್ಟಿಗೆ ಎಲ್ಲರಿಗೂ ಆಗಬಹುದು.

ಶ್ರೀ ವಾಟಾಳ್ ನಾಗರಾಜ್:- ಇದರಿಂದ ಖಂಡಿತವಾಗಿ ಅನಾನುಕೂಲವಾಗುತ್ತದೆ. ಊರಿಗೆ ಹೋಗಿರತಕ್ಕಂಥವರು ಶುಕ್ರವಾರ, ಶನಿವಾರ ಬರುವುದಿಲ್ಲ. ಭಾನವಾರ ಮತ್ತೆ ರಜೆ ಇರುತ್ತದೆ. ಆದ್ದರಿಂದ ಸೋಮವಾರ ಅನುಕೂಲವಾದ ದಿನ.

ಅಧ್ಯಕ್ಷರು:- ಶನಿವಾರ ಸೇರೋಣ.

ಪ್ರಕಟಣೆ

ಅಧ್ಯಕ್ಷರು:- ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 115ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ 1993 ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ 13-1-1993ರಂದು ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಈ ಸಭೆ ಏಳುವುದರೊಳಗೆ ನನಗೆ ಅವಕಾಶ ಕೊಡುತ್ತೀರಿ ಎಂದು ಆಶ್ವಾಸನೆ ಕೊಟ್ಟಿದ್ದೀರಿ. ನಾನು ಬೆಳಿಗ್ಗೆಯಿಂದ ಕಾದಿದ್ದೇನೆ. ಇವತ್ತು ಸಿದ್ಧನಾಗಿದ್ದೇನೆ, ದಯಮಾಡಿ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು:- ಈ ಕಾರ್ಯಸೂಚಿ ಪ್ರಕಾರ ಇನ್ನೂ 2-3 ವಿಷಯಗಳು ಚರ್ಚೆಯಾಗಬೇಕಾಗಿದೆ. ಒಂದು ಮುಖ್ಯವಾದ ಗಮನ ಸೆಳೆಯುವ ಸೂಚನೆ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟಿದ್ದದು. ಅದು ನೀವು ಬರಲಿ ಅಂತ ಮುಂದಕ್ಕೆ ಹಾಕಿದ್ದೆವು, ಅದು ಚರ್ಚೆಯಾಗಬೇಕಾಗಿದೆ. ಜೊತೆಗೆ ಕರ್ನಾಟಕ ವಿದ್ಯುಚ್ಚಕ್ತಿ ಮಂಡಲಿ ಸೂಚನೆ ಅದರ ಬಗ್ಗೆ ಟ್ರಾನ್ಸ್‌ಫಾರ್ಮರ್ ವಿಚಾರದಲ್ಲಿ ಚರ್ಚೆಯಾಗಬೇಕಾಗಿದೆ. ಇವತ್ತು ಬೆಳಿಗ್ಗೆ 9-30 ಗಂಟೆಯಿಂದ ಕುಳಿತಿದ್ದೆವು ಜೊತೆಗೆ ನಮ್ಮ ಪತ್ರಿಕಾ ಮಿತ್ರರಿಗೂ ಕೂಡ ಬಹಳ ತೊಂದರೆಯಾಗಿದೆ. ಅವರೆಲ್ಲ ಬೆಳಿಗ್ಗೆ 9 ಗಂಟೆಗೆ ಬಂದವರು ಈಗಾಗಲೇ ಆರೂವರೆ ಗಂಟೆಯಾಗಿದೆ. ಅವರು ಈ ದಿವಸದ ಕಾರ್ಯಕಲಾಪಗಳ ವರದಿಯನ್ನು ಅವರವರ ಪತ್ರಿಕಾಲಯಗಳಿಗೆ ಕಳಿಸಿಕೊಡಬೇಕು. ಸರ್ಕಾರದವರು ಮುಕ್ತ ಮನಸ್ಸಿನಿಂದ ಯಾವುದೇ ಚರ್ಚೆಗೆ ನಾವು ನಿರ್ಬಂಧ ಹಾಕುವುದಿಲ್ಲ ಎಂದು ಮನವರಿಕೆ ನಮಗೆ ಮಾಡಿಕೊಟ್ಟಿದ್ದಾರೆ. ಜಿಜ್ಞಾಸೆ ಇರುವುದು ನಾಳೆ ಹಬ್ಬದ ತೊಂದರೆ, ಶುಕ್ರವಾರ ಮಾಡಬೇಕೇ ಶನಿವಾರ ಮಾಡಬೇಕೇ ಅಂತ. ಬಹುತೇಕ ಸದಸ್ಯರು ಶನಿವಾರ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಸದನ...

ಶ್ರೀ ಪಿ.ಜಿ.ಆರ್. ಸಿಂಧ್ಯ:- ಪತ್ರಿಕೆಯವರಿಲ್ಲದಿದ್ದರೂ ಪರವಾಗಿಲ್ಲ, ತಾವು ರಾಜ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ನನಗೆ ಅವಕಾಶ ಕೊಡಬೇಕು.

Mr.Speaker:- The Floor is yours. Even when we meet next time also you can continue. Yours is an incomplete speech.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಪತ್ರಿಕೆಯವರಿಲ್ಲದಿದ್ದರೂ ಪರವಾಗಿಲ್ಲ. ಇದು ಕನ್ನಡಿಗರ ಹಿತದೃಷ್ಟಿಯಿಂದಾಗಿ, ತಾವು ಒಪ್ಪಿಗೆ ಕೊಟ್ಟರೆ ನಾವು ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ. ಅದು ಕೆಇಬಿ ದಲ್ಲ. ಮುಂಬಯಿಯಲ್ಲಿ ನಾವು ಯಾವತ್ತೂ ನೋಡದೆ ಇರದ ಅವ್ಯಾಹತ ಹಿಂಸೆ ನಡೆಯುತ್ತಾ ಇದೆ. ನಾವೆಂದೂ ಕಾಣದ ಹಿಂಸಾಚಾರವನ್ನು ನಾವು ನೋಡುತ್ತಾ ಇದ್ದೇವೆ ಅದಿನ್ನೂ ತಹಬಂದಿಗೆ ಬರ್ತಾ ಇಲ್ಲ. ಇವತ್ತು ಸಂಜೆ ಪತ್ರಿಕೆಗಳ ವರದಿ ಪ್ರಕಾರ ಪರಿಸ್ಥಿತಿ ಇನ್ನೂ ಕಂಟ್ರೋಲಿಗೆ ಬಂದಿಲ್ಲ ಎಂದು ಕೇಳಿದ್ದೇವೆ. ಈಗ ಅಲ್ಲಿ ಕನ್ನಡಿಗರ ಪರಿಸ್ಥಿತಿ ಏನು? ನನಗೆ ತಿಳಿದಿರುವ ಹಾಗೆ ಅನೇಕ ಕನ್ನಡಿಗರು ಬರುತ್ತಾ ಇದ್ದಾರೆ ಈ ಕಡೆ. ಅವರ ಆಸ್ತಿಪಾಸ್ತಿ ಲೂಟಿಯಾಗಿದೆ ಎಂದು ಕೇಳಿದ್ದೇವೆ. ಎಷ್ಟು ಜನ ಸತ್ತಿದ್ದಾರೆ, ಏನು ಅವರ ಪರಿಸ್ಥಿತಿ, ತಾವೇನಾದರೂ ಅಲ್ಲಿ ಮುಖ್ಯಮಂತ್ರಿಗಳ ಜೊತೆ ಮಾತಾಡಿದ್ದೀರಾ? ಇದರ ಬಗ್ಗೆ ತಾವು ದಯವಿಟ್ಟು ವಿಚಾರ ತಿಳಿದುಕೊಂಡು ಒಂದು ಹೇಳಿಕೆ ಕೊಡಬೇಕು, ಇವತ್ತೇ ಹೇಳಬೇಕೆಂದು